# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 143 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 06.12.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 143 • PRGI No:KARKAN/2023/88055 • VIJAYANAGARA • 06.12.2024 • Friday • Page:04 • Rs:2




BOOK YOUR ADVERTISEMENTS TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper



ಸುದ್ದಿ, ಜಾಹೀರಾತು, ಜಾಗೃತಿ ಪ್ರಕಟಣೆಗಳ ಪ್ರಕಟಣೆಗಾಗಿ
ಸಂಪರ್ಕಿಸಿ
ಮೊ: 9448633038
e-mail: hampitimes@gmail.com


# ಮಕ್ಕಳ ಹಕ್ಕುಗಳ ರಕ್ಷಣೆ ಕಾಯ್ದೆ ಜಾಗೃತಿ
# ವಿದ್ಯಾರ್ಥಿಗಳಿಂದ ಪ್ರಶ್ನೆಗಳ ಸುರಿಮಳೆ

## ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಿದ ಆಯೋಗದ ಸದಸ್ಯ ಶಶಿಧರ್ ಕೋಸಂಬೆ
## ಸ್ನೇಹಿತರ ಸಮಸ್ಯೆ ನೋಡಿ ಸಹಪಾಠಿಗಳು ಸುಮ್ಮನಿರಬೇಡಿ, ದೂರು ನೀಡಿ



**ಹಂಪಿ ಟೈಮ್ಸ್ ಹೊಸಪೇಟೆ**

ಮಗುವಿಗೆ ಸಹಪಾಠಿ ಹಾಗೂ ಸ್ನೇಹಿತರು ಇದ್ದೇ ಇರುತ್ತಾರೆ. ಸಂಕಷ್ಟದಲ್ಲಿರುವವರನ್ನು ಕಂಡಾಗ ಪೋಷಕರಿಗೆ ಅಥವಾ ಶಿಕ್ಷಕರಿಗೆ, ಪೊಲೀಸ್ ಇಲಾಖೆ ಅಥವಾ ಮಕ್ಕಳ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿ ಸಹಾಯ ಮಾಡಿದರೆ ಮಾತ್ರ ಮಕ್ಕಳ ರಕ್ಷಣಾ ಕಾಯ್ದೆಗಳ ಪೂರಕ ಅನುಷ್ಠಾನ ಸಾಧ್ಯವಾಗಲಿದೆ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಅಯೋಗದ ಸದಸ್ಯರಾದ ಶಶಿಧರ್ ಕೋಸಂಬೆ ಹೇಳಿದರು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಇತರೆ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಮಕ್ಕಳೊಂದಿಗೆ ಮುಕ್ತ ಸಂವಾದ ಹಾಗೂ ಮಕ್ಕಳಿಗೆ ಸಂಬಂಧಿಸಿದ ಕಾಯ್ದೆಗಳ ಕುರಿತು ಜಾಗೃತಿ ಕಾರ್ಯಕ್ರಮದಲ್ಲಿ ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಿ ಮಾತನಾಡಿದರು.


ಮಕ್ಕಳು ತಮ್ಮ ಹಕ್ಕುಗಳ ಬಗ್ಗೆ ತಿಳಿದಿರಬೇಕು, ಮಕ್ಕಳಿಗಾಗಿ ರೂಪಿಸಿರುವ ಕಾನೂನುಗಳಾದ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಅಧಿನಿಯಮ 2009, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2015, ಮತ್ತು ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ, ಶೋಷಣೆ, ಮತ್ತು ಲೈಂಗಿಕ ಕಿರುಕುಳದಿಂದ ಮಕ್ಕಳನ್ನು ರಕ್ಷಿಸಲು ಜಾರಿಮಾಡಿರುವ ಪೋಕ್ಸೋ ಕಾಯ್ದೆ 2012ರ ಸಂಪೂರ್ಣ ಅರಿವು ಮಕ್ಕಳಿಗಿರಬೇಕು. ಒಬ್ಬ ವಿದ್ಯಾರ್ಥಿ ಕಾನೂನುಗಳ ಬಗ್ಗೆ ತಿಳಿದುಕೊಂಡರೆ ಒಂದು ಕುಟುಂಬ ಪರಿವರ್ತನೆಯಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಹೆಣ್ಣು ಮಕ್ಕಳು ದೌರ್ಜನ್ಯಕ್ಕೆ ಒಳಗಾದರೆ ಏನ್ನೆಲ್ಲ ಕ್ರಮಗಳನ್ನು ಕೈಗೊಳ್ಳಬೇಕು, ಶಾಲೆಗಳಲ್ಲಿ ಸರಿತಿಡತಿಯಾದ ಶೌಚಾಲಯ, ಕುಡಿಯುವ ನೀರು, ಶಾಲೆಗೆ ಕಾಂಪೌಂಡ್‌ಗಳು, ಶಾಲೆಗಳಿಗೆ ಹೋಗಲು ಬಸ್ ಸೌಕರ್ಯದ ವ್ಯವಸ್ಥೆಗಳಿಲ್ಲ >>4

> ಮಕ್ಕಳ ಮೇಲೆ ಆಗುವ ಲೈಂಗಿಕ ದೌರ್ಜನ್ಯ ಗಳು ಹೆಚ್ಚಾಗಿ ಮನೆಯಲ್ಲಿ ಅಥವಾ ಅಕ್ಕ ಪಕ್ಕದ ಪಕ್ಕದವರಿಂದ ಆಗುತ್ತವೆ ಎಂದು ವರದಿಗಳು ಹೇಳುತ್ತವೆ. ಮಕ್ಕಳು ದೌರ್ಜನ್ಯಕ್ಕೆ ಒಳಗಾದರೆ ಹತ್ತಿರದ ಪೊಲೀಸ್ ಠಾಣೆಗೆ ಹೋಗಿ, ಮಕ್ಕಳ ರಕ್ಷಣೆಗಾಗಿಯೇ ಇರುವ ಪ್ರತ್ಯೇಕ ಪೊಲೀಸರಲ್ಲಿ ದೂರು ದಾಖಲಿಸಬೇಕು.
>
> – **ಶಶಿಧರ್ ಕೋಸಂಬೆ,** ಸದಸ್ಯರು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಅಯೋಗ

> ಯಾವ ಶಾಲೆಗಳಲ್ಲಿ ಮೂಲಭೂತ ಸೌಕರ್ಯ ಗಳು ಇಲ್ಲವೋ, ಅಂತಹ ಶಾಲೆಗಳಲ್ಲಿ ಅದಷ್ಟು ಬೇಗ ಸೌಕರ್ಯಗಳನ್ನು ಕಲ್ಪಿಸಲಾಗುವುದು. ಸಮಾಜದಲ್ಲಿ ಹೆಣ್ಣು ಭ್ರೂಣ ಹತ್ಯೆ, ಬಾಲ್ಯ ವಿವಾಹಗಳು ಇಂದಿಗೂ ಸಮಾಜಿಕ ಪಿಡುಗಾಗಿವೆ. ಅವುಗಳನ್ನು ಹೋಗಲಾಡಿಸಲು ಕಾನೂನುಗಳ ಜೋತೆ ಸಮಾಜವು ಸಹಕರಿಸಬೇಕು. ವಿದ್ಯಾವಂತ ಮಕ್ಕಳು ಪೋಷಕರಿಗೆ ತಿಳಿಸುವಲ್ಲಿ ಹಿಂಜರಿಯಬೇಡಿ
>
> – **ಎಂ.ಎಸ್.ದಿವಾಕರ, ಜಿಲ್ಲಾಧಿಕಾರಿ**

## ಆನಂದ ಬಾಣ




## ಇಂದು ಕೊಪ್ಪಳದಲ್ಲಿ ಕೆ.ಡಿ.ಪಿ. ಸಭೆ

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯ ಕೊಪ್ಪಳ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ತ್ರೈಮಾಸಿಕ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯನ್ನು ಡಿಸೆಂಬರ್ 6ರಂದು ಬೆಳಿಗ್ಗೆ 10 ಗಂಟೆಗೆ ಕೊಪ್ಪಳ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಲಿದೆ. ಸಭೆಯ ಅಧ್ಯಕ್ಷತೆಯನ್ನು ಕೊಪ್ಪಳ ವಿಧಾನಸಭಾ ಕ್ಷೇತ್ರದ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ವಹಿಸಿಕೊಳ್ಳುವರು. ಕೊಪ್ಪಳ ತಾಲ್ಲೂಕು ಮಟ್ಟದ ಎಲ್ಲಾ ಅನುಷ್ಠಾನಾಧಿಕಾರಿಗಳು ಕೊಪ್ಪಳ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ ನವೆಂಬರ್–2024ರ ಮಾಹೆಯ ಅಂತ್ಯದವರೆಗೆ ಸಾಧಿಸಿದ ಪ್ರಗತಿ ಮತ್ತು ಅನುಪಾಲನಾ ವರದಿಯೊಂದಿಗೆ ಈ ಸಭೆಗೆ ಹಾಜರಾಗಬೇಕು ಎಂದು ಕೊಪ್ಪಳ ತಾಪಂ ಇಒ ತಿಳಿಸಿದ್ದಾರೆ.

## ನಾಳೆ ಕೊಪ್ಪಳ ನಗರಸಭೆ ಸಾಮಾನ್ಯ ಸಭೆ

**ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ನಗರಸಭೆ ಸಾಮಾನ್ಯ ಸಭೆಯನ್ನು ಡಿಸೆಂಬರ್ 7ರಂದು ಬೆಳಿಗ್ಗೆ 11 ಗಂಟೆಗೆ ನಗರಸಭೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್ ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸುವರು ಎಂದು ಪೌರಾಯುಕ್ತರು ತಿಳಿಸಿದ್ದಾರೆ.

### ಮೈಕ್ರೋ ನ್ಯೂಸ್

## ಸಂಜನಾ ಮೈದೂರು ಚರ್ಚಾ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ



**ಹಂಪಿ ಟೈಮ್ಸ್ ಕೊಟ್ಟೂರು**

ವಿಜಯನಗರ ಜಿಲ್ಲೆಯ ವಿ.ಎನ್.ಸಿ ಕಾಲೇಜ್‌ನಲ್ಲಿ ಬುಧವಾರ ನಡೆದ ಕಲ್ಬುರ್ಗಿ ವಿಭಾಗ ಮಟ್ಟದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳ ಸ್ಪರ್ಧೆಗಳಲ್ಲಿ ಕೊಟ್ಟೂರಿನ ಗೊರ್ಲಿ ಶರಣಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಸಂಜನಾ ಮೈದೂರು ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿ, ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ಕಾಲೇಜಿನ ಪ್ರಾಚಾರ್ಯರಾದ ಡಾ.ಜಿ. ಸೋಮಶೇಖರಪ್ಪ ಹಾಗೂ ಉಪನ್ಯಾಸಕರು ಗುರುವಾರ ವಿದ್ಯಾರ್ಥಿನಿಗೆ ಸನ್ಮಾನಿಸಿ ಗೌರವಿಸಿ ಪ್ರೋತ್ಸಾಹಿಸಿದರು.

## ಇಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿನಿರ್ವಾಣ ದಿನ

**ಹಂಪಿ ಟೈಮ್ಸ್ ಬಳ್ಳಾರಿ**



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿನಿರ್ವಾಣ ದಿನದ ಅಂಗವಾಗಿ ಡಿ.06 ರಂದು ಬೆಳಿಗ್ಗೆ 09 ಗಂಟೆಗೆ ನಗರದ 1ನೇ ಗೇಟ್ ಹತ್ತಿರ ಅಂಬೇಡ್ಕರ್ ಭವನದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮತ್ತು ಪುಷ್ಪನಮನ ಮಾಡುವ ಮೂಲಕ ಪೂಜೆ ಸಲ್ಲಿಸಲಾಗುವುದು.

ಕಾರ್ಯಕ್ರಮಕ್ಕೆ ಜಿಲ್ಲೆಯ ವಿವಿಧ ದಲಿತ ಸಂಘ–ಸಂಸ್ಥೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ದಲಿತ ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಮಲ್ಲಿಕಾರ್ಜುನ ತಿಳಿಸಿದ್ದಾರೆ.

## ಭತ್ತಕ್ಕೆ 2300 ರೂ ಬೆಂಬಲ ಬೆಲೆ ನಿಗದಿ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಬೆಳೆದ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಸರ್ಕಾರ ನಿಗಧಿಪಡಿಸಿರುವ ಎಫ್.ಎ.ಕ್ಯೂ. ಗುಣಮಟ್ಟದ ಸಾಮಾನ್ಯ ಮತ್ತು ಗ್ರೇಡ್.ಎ ಭತ್ತ, ರಾಗಿ ಹಾಗೂ ಬಿಳಿ ಜೋಳ ಧಾನ್ಯಗಳನ್ನು ರೈತರಿಂದ ನೇರವಾಗಿ ಖರೀದಿಸಲು ಬೆಂಬಲ ಬೆಲೆ ನಿಗಧಿ ಪಡಿಸಲಾಗಿದ್ದು, ರೈತರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.

**ನಿಗಧಿ ಪಡಿಸಿದ ಬೆಲೆ:** ಸಾಮಾನ್ಯ ಭತ್ತ ಕ್ವಿಂಟಾಲ್ ಗೆ 2300 ರೂ., ಗ್ರೇಡ್ ಎ ಭತ್ತ 2320 ರೂ., ಹೈಬ್ರೀಡ್ ಬಿಳಿಜೋಳ 3371 ರೂ., ಮಾಲ್ದಂಡಿ ಬಿಳಿಜೋಳ 3421 ರೂ., ರಾಗಿ 4290 ರೂಪಾಯಿಗಳ ಬೆಲೆ ನಿಗಧಿಪಡಿಸಲಾಗಿದೆ. ಖರೀದಿ ಕೇಂದ್ರದ ಮಾಹಿತಿ: ಹೊಸಪೇಟೆಗೆ ಅಡವಿ. ಹುಲಗಪ್ಪ ಮೊ.ನಂ:9448474752, ಹಗರಿಬೊಮ್ಮನಹಳ್ಳಿಗೆ ಎ.ರಾಘವೇಂದ್ರ ಮೊ.ನಂ: 9845779042, ಕೂಡ್ಲಿಗಿ ಗೆ ಜಿ.ಕೆ.ಆರ್.ಮಲ್ಲಿಕಾರ್ಜುನ ಮೊ.ನಂ:9632032224, ಕೊಟ್ಟೂರು ಜಿ.ಕೊಟ್ರೇಶಿ ಮೊ.ನಂ: 7829626177, ಹೂವಿನಹಡಗಲಿ ದೊಡ್ಡಮನಿ ಶಾಂತನಗೌಡ ಮೊ.ನಂ: 9886852395, ಹರಪನಹಳ್ಳಿ ಬಸವರಾಜು ಜಿ. ಮೊ.ನಂ: 7760310203, ಇವರುಗಳನ್ನು ಎಪಿಎಂಸಿ ಯಾರ್ಡ್‌ಗಳಿಗೆ ಮುಖ್ಯ ಕಾರ್ಯನಿರ್ವಾಹಕರನ್ನಾಗಿ ಮತ್ತು ಹರಪನಹಳ್ಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಎಂ ಸೀನಪ್ಪ ಮೊ. ನಂ: 7760014043 ಇವರನ್ನು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ ಯೋಜನೆಯ ಸದುಪಯೋಗ ಪಡೆಸಿಕೊಳ್ಳಬೇಕು ತಿಳಿಸಿದ್ದಾರೆ.

### ವಿಶ್ವ ಮಣ್ಣು ದಿನಾಚರಣೆ ಕಾರ್ಯಕ್ರಮದಲ್ಲಿ ಸಿಇಓ ರಾಹುಲ್ ರತ್ನಂ ಪಾಂಡೇಯ ಹೇಳಿಕೆ

# ಮಣ್ಣಿನ ಸಂರಕ್ಷಣೆ ಅತ್ಯವಶ್ಯಕವಾಗಿದೆ



**ಹಂಪಿ ಟೈಮ್ಸ್ ಕೊಪ್ಪಳ**

ಕೃಷಿಯ ಮೂಲವಾದ ಮಣ್ಣು ಅತ್ಯಮೂಲ್ಯವಾದ ನೈಸರ್ಗಿಕ ಸಂಪನ್ಮೂಲವಾಗಿದ್ದು, ಮಣ್ಣಿನ ಸಂರಕ್ಷಣೆ ಅತ್ಯವಶ್ಯಕವಾಗಿದೆ ಎಂದು ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಹೇಳಿದರು.

ಅವರು ಗುರುವಾರ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಹಾಗೂ ಕೃಷಿ ತಂತ್ರಜ್ಞರ ಸಂಸ್ಥೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವ ಮಣ್ಣು ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮಾನವನ ಆಹಾರದ ಮೂಲವಾಗಿರುವ ಮಣ್ಣಿನ ಆರೋಗ್ಯ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಆರೋಗ್ಯದ ಹಿತದೃಷ್ಟಿಯಿಂದ ನಮ್ಮ ದೇಹವನ್ನು ಹೇಗೆ ನೋಡಿಕೊಳ್ಳುತ್ತೇವೆ. ಅದೇ ರೀತಿ ನಾವು ಮಣ್ಣಿನ ಪರಿಸ್ಥಿತಿಗಳ ಬಗ್ಗೆಯೂ ಗಮನ ಹರಿಸಬೇಕು. ಮಣ್ಣಿನಲ್ಲಿ ಯಾವ ಕೊರತೆಯಿದೆ, ಮಣ್ಣಿಗೆ ಏನು ಬೇಕು, ಯಾವ ರೀತಿ ಮಣ್ಣಿನ ಗುಣಮಟ್ಟವನ್ನು ಸುಧಾರಿಸಬಹುದು ಎಂಬುವುದನ್ನು ಎಲ್ಲರಲ್ಲಿಯೂ ಮಾಹಿತಿ ಇರಬೇಕು. ಮಣ್ಣಿನ ಫಲವತ್ತತೆ ಕಾಪಾಡಲು ಸರ್ಕಾರದ ಕಾರ್ಯಕ್ರಮಗಳು ಚಾಲ್ತಿಯಲ್ಲಿದ್ದು, ಅವುಗಳ ಬಗ್ಗೆ ರೈತರಿಗೆ ಜಾಗೃತಿ ಮೂಡಿಸಲು ಕೃಷಿ ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಸೂಚನೆ ನೀಡಿದರು.

ಮಣ್ಣಿನ ಸಂರಕ್ಷಣೆಗಾಗಿ ನರೇಗಾ ಯೋಜನೆಯಡಿ ಬದು ನಿರ್ಮಾಣದಂತಹ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಚೆಕ್‌ಡ್ಯಾಂ, ಕೃಷಿ ಹೊಂಡಗಳ ನಿರ್ಮಾಣ, ಕೃಷಿ ಮತ್ತು ತೋಟಗಾರಿಕೆಯಲ್ಲಿ ಸಾವಯವ ಪದ್ಧತಿಯನ್ನು ಅಳವಡಿಕೆ ಮಾಡಲಾಗುತ್ತಿದೆ. ಇದಲ್ಲದೇ ಮಣ್ಣಿನ ಫಲವತ್ತತೆಗಾಗಿ ಕೃಷಿ, ತೋಟಗಾರಿ ಹಾಗೂ ವಿವಿಧ ಇಲಾಖೆಗಳ ಮೂಲಕ ಬೇರೆ–ಬೇರೆ ಯೋಜನೆಗಳಿದ್ದು, ಇಂತಹ ಕಾರ್ಯಕ್ರಮಗಳು ರೈತರಿಗೆ ಹಾಗೂ ಜನರಿಗೆ ಸರಿಯಾಗಿ ತಲುಪಿಸುವ ಕೆಲಸವನ್ನು ಅಧಿಕಾರಿಗಳು ಮಾಡಬೇಕು. ಕೃಷಿ ಸಖಿಯರ ಮೂಲಕವೂ ಸಹ ರೈತರಿಗೆ ಮಾಹಿತಿ ನೀಡಬೇಕು ಎಂದರು.

ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಮಾತನಾಡಿ, ಮಾನವನಿಂದ ಮಣ್ಣಿನ ಆರೋಗ್ಯ ಹದೆಗೆಡುತ್ತಿದೆ. ನಾವೆಲ್ಲರೂ ಮಣ್ಣಿನ ಆರೋಗ್ಯ ಹಾಳಾಗುವುದಕ್ಕೆ ಕಾರಣರಾಗದೇ ಮಣ್ಣಿನ ಆರೋಗ್ಯವನ್ನು ಕಾಪಾಡಬೇಕು. ಮಣ್ಣಿನ ದಿನಾಚರಣೆ ಒಂದು ದಿನಕ್ಕೆ ಸೀಮಿತವಾಗಬಾರದು. ಪ್ರತಿ ದಿನ ಪ್ರತಿಯೊಬ್ಬರೂ ಮಣ್ಣನ್ನು ಸಂರಕ್ಷಿಸಬೇಕು ಹಾಗೂ ಎಲ್ಲರೂ ಮಣ್ಣನ್ನು ಉತ್ತಮವಾಗಿ ನಿರ್ವಹಣೆ ಮಾಡಬೇಕು ಎಂದು ಹೇಳಿದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕ ರುದ್ರೇಶಪ್ಪ ಟಿ.ಎಸ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಈ ವರ್ಷ ಜಿಲ್ಲೆಯಲ್ಲಿ 23,175 ಮಣ್ಣು ಮಾದರಿಗಳನ್ನು ತೆಗೆಯಲು ಗುರಿ ನಿಗದಿಪಡಿಸಲಾಗದ್ದು, ಮಣ್ಣು ಮಾದರಿ ಸಂಗ್ರಹಿಸಲಾಗಿದೆ ಹಾಗೂ ವಿಶ್ಲೇಷಣೆ ಪ್ರಗತಿಯಲ್ಲಿದೆ. ಮಣ್ಣಿನ ಸಂರಕ್ಷಣೆ ಮತ್ತು ಮಣ್ಣಿನ ಮಹತ್ವದ ಬಗ್ಗೆ ಶಾಲಾ >>4


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
HAMPI TIMES VIJAYANAGARA

**SSLC ಈ ಬಾರಿ ಫಲಿತಾಂಶ ನಮ್ಮದೆ**


**10ನೇ ತರಗತಿ ವಿದ್ಯಾರ್ಥಿಗಳಿಗೆ ವಿಜ್ಞಾನ ಚಿತ್ರ ಸ್ಪರ್ಧೆ**
**ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲು ಒಂದು ಉತ್ತಮ ಅವಕಾಶ!**

ವಿಜ್ಞಾನ ಕಲಿಕೆಯು ಕೇವಲ ಪಠ್ಯಪುಸ್ತಕ ಓದುವುದು ಮತ್ತು ಪರೀಕ್ಷೆ ಬರೆಯುವುದಕ್ಕೆ ಸೀಮಿತವಲ್ಲ. ಅದು ಸೃಜನಾತ್ಮಕತೆಯನ್ನು ಬೆಳೆಸುವ ಮತ್ತು ತತ್ವಗಳನ್ನು ತಾತ್ವಿಕವಾಗಿ ಅರ್ಥಮಾಡಿಕೊಳ್ಳುವ ಒಂದು ಪ್ರಕ್ರಿಯೆ. 10ನೇ ತರಗತಿ ವಿದ್ಯಾರ್ಥಿಗಳಿಗೆ, ಪರೀಕ್ಷೆಯ ಸಿದ್ಧತೆಯನ್ನು ಬೆಂಬಲಿಸಲು ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು **ಹಂಪಿ ಟೈಮ್ಸ್ ಬಳಗ**ದಿಂದ "**ವಿಜ್ಞಾನ ಚಿತ್ರ ಸ್ಪರ್ಧೆ**" ಆಯೋಜಿಸಲಾಗಿದೆ.

**-: ಈ ವಾರದ (06-12-2024) ಚಿತ್ರ ಸ್ಪರ್ಧೆ : -**
**ಮನುಷ್ಯನ ಹೃದಯದ ಛೇದ ನೋಟದ ಅಂದವಾದ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ?**

ಸಾಮಾನ್ಯ ಸೂಚನೆಗಳು

1. ವಿದ್ಯಾರ್ಥಿಯು 2023-24 ಶೈಕ್ಷಣಿಕ ಸಾಲಿನಲ್ಲಿ 10ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿರಬೇಕು.
2. ಶಿಕ್ಷಕರ/ಶಿಕ್ಷಕಿಯರ ಸಮ್ಮುಖದಲ್ಲಿ ನಿಗದಿತ ಸಮಯ (10 ನಿಮಿಷ) ದಲ್ಲಿ ಶುಕ್ರವಾರದಂದು ಶಾಲೆಯಲ್ಲಿ ಚಿತ್ರವನ್ನು A4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ನಿಂದ ಬಿಡಿಸಬೇಕು
3. ಆಯಾ ಶಾಲೆಯಲ್ಲಿ ಆಯ್ಕೆಯಾದ ಅತ್ಯುತ್ತಮವಾದ ಒಂದು ಚಿತ್ರ ಮಾತ್ರ ಗುರುಗಳು ಆಯ್ಕೆ ಮಾಡಿ , ಮುಖ್ಯ ಶಿಕ್ಷಕರು/ಶಿಕ್ಷಕರ ಸಹಿಯೊಂದಿಗೆ ವಾಟ್ಸ್‌ಪ್ ನಂಬರಿಗೆ ಕಳುಹಿಸಬೇಕು. ಹೆಚ್ಚಿನ ಚಿತ್ರಗಳಿಗೆ ಅವಕಾಶವಿರುವುದಿಲ್ಲ.
4. ಆಯ್ಕೆಯಾದ ಚಿತ್ರದೊಂದಿಗೆ ವಿದ್ಯಾರ್ಥಿಯ ಹೆಸರು, ಶಾಲೆಯ ವಿಳಾಸ ಮತ್ತು ವಿಜ್ಞಾನ ಮಾರ್ಗದರ್ಶಿ ಶಿಕ್ಷಕರ ಹೆಸರನ್ನು ತಪ್ಪದೇ ಸ್ಪಷ್ಟವಾಗಿ ನಮೂದಿಸಬೇಕು.
5. ತಡವಾಗಿ ಕಳುಹಿಸಿದ ಮತ್ತು ಮಾಹಿತಿ ಕೊರತೆ ಇರುವ ಚಿತ್ರಗಳನ್ನು ಪರಿಗಣಿಸಲಾಗುವುದಿಲ್ಲ.
6. ಆಯ್ಕೆಯಾದ ಅತ್ಯುತ್ತಮವಾದ ಒಂದು ಚಿತ್ರವನ್ನು ಫೋಟೋ ಸಹಿತ ಹಂಪಿ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.
7. ಆಯ್ಕೆ ತಂಡದ ತೀರ್ಮಾನವೇ ಅಂತಿಮ ವಾಗಿರುತ್ತದೆ.
8. ಮಕ್ಕಳ ಉತ್ತಮ ಶೈಕ್ಷಣಿಕ ಫಲಿತಾಂಶಕ್ಕಾಗಿ ಮುಖ್ಯಗುರುಗಳು ಹಾಗೂ ಶಿಕ್ಷಕ ವರ್ಗದವರು ನಮ್ಮೊಂದಿಗೆ ಕೈಜೋಡಿಸುತ್ತೀರೆಂಬ ಸದಾಶಯ ನಮ್ಮದು.



scan to read epaper.hampitimes.com

ವಿ.ಸೂ: ಶುಕ್ರವಾರ ಸಂಜೆ 6 ಗಂಟೆಯೊಳಗೆ ಅತ್ಯುತ್ತಮ ಚಿತ್ರದ ಫೋಟೋ ತೆಗೆದು ಮೊಬೈಲ್ ಸಂಖ್ಯೆ **9972603099** ಗೆ ಕಳುಹಿಸಬೇಕು. ಹೆಚ್ಚಿನ ಚಿತ್ರಗಳಿಗೆ ಅವಕಾಶವಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9448633038

**ಹಂಪಿ ಟೈಮ್ಸ್ ಬಳಗ, ವಿಜಯನಗರ**

visit our website at www.hampitimes.com / epaper.hampitimes.com

## ಸ್ಟುಡೆಂಟ್ ಕಾಲಂ


# ಕತ್ತೆಯ ಜಾಣತನ



ಗದ್ದಿಕೆರೆ ಎಂಬ ಹಳ್ಳಿಯಲ್ಲಿ ರೈತನು ತನ್ನ ಕತ್ತೆಯೊಂದಿಗೆ ಬದುಕುತ್ತಿದ್ದ. ಕತ್ತೆ ರೈತನ ಕೆಲಸಕ್ಕೆ ದಿನನಿತ್ಯದ ಸಹಾಯ ಮಾಡುತ್ತಿತ್ತು ರೈತನಿಗೆ ವ್ಯವಸಾಯಕ್ಕೆ ಬೇಕಾದ ಪರಿಕರಗಳನ್ನು ಕತ್ತೆ ತನ್ನ ಮೇಲೆ ಹೊತ್ತುಕೊಂಡು ಹೊಲಕ್ಕೆ ಹೋಗುತ್ತಿತ್ತು ಹೀಗೆ ಕತ್ತೆ ಮತ್ತು ರೈತ ಬಹಳ ಅನೋನ್ಯವಾಗಿದ್ದರು.

ರೈತನ ಮಕ್ಕಳಿಗೆ ಕತ್ತೆ ಕಂಡರೆ ಅಷ್ಟಕಷ್ಟೆ ಅವರಪ್ಪ ಅನಾವಶ್ಯಕವಾಗಿ ಕತ್ತೆ ಯನ್ನು ಸಾಕಿರುವನು ಎಂದು ಮಾತಾಡಿಕೊಳ್ಳುತ್ತಿದ್ದರು ಆದರೆ ಅವರ ಮಾತಿಗೆ ರೈತ ಕಿವಿಗೊಡುತ್ತಿರಲಿಲ್ಲ. ಕಾಲಕಳದಂತೆ ವಯಸ್ಸಾದ್ದರಿಂದ ಕತ್ತೆ ಹೆಚ್ಚು ಕೆಲಸಕ್ಕೆ ಬಾರದಂತಾಗಿತ್ತು. ವಯಸ್ಸಾದ ಕತ್ತೆಯನ್ನು ಇಟ್ಟುಕೊಂಡು ಏನು ಮಾಡುತ್ತೀಯ ಅದನ್ನು ಎಲ್ಲಿಯಾದರೂ ದೂರ ಬಿಟ್ಟು ಬನ್ನಿ ಎಂದು ಮಕ್ಕಳು ತಾಕೀತು ಮಾಡತೊಡಗಿದರು ಇದರಿಂದ ಬೇಸರಗೊಂಡ ರೈತ ಕತ್ತೆಯನ್ನು ದೂರದ ಕಾಡಿಗೆ ಬಿಡಲು ನಿರ್ಧರಿಸಿದ.

ಒಂದು ದಿನ, ರೈತನು ತನ್ನ ಕತ್ತೆಯನ್ನು ಕಾಡಿನಲ್ಲಿ ಬಿಡಲು ನಿರ್ಧರಿಸಿದ, ಹೀಗಾಗಿ, ಕತ್ತೆಯನ್ನು ಕಾಡಿಗೆ ಕೊಂಡೊಯ್ಯುವ, ದಾರಿಯಲ್ಲಿ ಒಂದು ಆಳವಾದ ಗುಂಡಿಗೆ ಇಬ್ಬರೂ ಬಿದ್ದರು. ಗುಂಡಿ ಆಳವಾಗಿತ್ತು, ರೈತ ಮತ್ತು ಕತ್ತೆ ಇಬ್ಬರೂ ಅದರಿಂದ ಹೊರಬರಲು ಸಾಧ್ಯವಾಗದೆ ಅಲ್ಲೆ ಇರುವ ಪರಿಸ್ಥಿತಿ ಎದುರಾಯಿತು ರೈತನು ಅಲ್ಲಿ ಏನು ಮಾಡಬೇಕೆಂದು ಯೋಚಿಸುತ್ತಿದ್ದಾಗ, ಜೋರಾಗಿ ಕತ್ತೆ ಅರಚತೊಡಗಿತು ಆಗ ದಾರಿಯಲ್ಲಿ ಹೋಗುತ್ತಿದ್ದವರು ಸಹಾಯಕ್ಕೆ ಬಂದರು ರೈತನನ್ನು ಹಗ್ಗದಿಂದ ಮೇಲಕ್ಕೆ ಎಳೆದುಕೊಂಡರು ಆದರೆ ವಯಸ್ಸಾದ ಕತ್ತೆಯನ್ನು ಹಗ್ಗದಿಂದ ಮೇಲೆಕ್ಕೆಳೆಯಲು ಸಾಧ್ಯವಾಗಲಿಲ್ಲ ಆಗ ಅಲ್ಲಿದ್ದ ಜನರೂ ರೈತನಿಗೆ ಹೇಗೂ ಕತ್ತೆಗೆ ವಯಸ್ಸಾಗಿದೆ ಅದನ್ನು ಅಲ್ಲೆ ಬಿಟ್ಟು ಬಿಡು ಎಂದರು. ಆಗ ರೈತನಿಗೂ ಅದೇ ಸರಿಎನಿಸಿ ಅಲ್ಲೆ ಬಿಡಲು ನಿರ್ಧರಿಸಿದ ಆದರೆ ಜನರ ಮತ್ತೆ ಬೇರೆಯವರಿಗೆ ಈ ರೀತಿ ತೊಂದರೆ ಆಗಬಾರದು ಈ ಗುಂಡಿಯನ್ನು ಮಣ್ಣಿನಿಂಧ ಮುಚ್ಚೋಣ, ಹೇಗೂ ಕತ್ತೆಗೆ ವಯಸ್ಸಾಗಿದೆ ಅದನ್ನು ಅಲ್ಲೆ ಮಣ್ಣಿನಲ್ಲಿ ಹೂತುಬಿಡೋಣ ಎಂಧು ಎಲ್ಲರೂ ಮಣ್ಣನ್ನು ಹಾಕತೊಡಗಿದರು ಆಗ ಕತ್ತೆ ಮಣ್ಣಲ್ಲಿ ನಾನು ಮುಚ್ಚಿಹೋಗುವೆ ಎಂಧು ಆಲೋಚಿಸಿ ಜನರು ಹಾಕುವ ಮಣ್ಣಿನ ಮೇಲೆ ನಿಲ್ಲತೊಡಗಿತು ಹೆಚ್ಚು ಮಣ್ಣು ಬಿದ್ದಗದಾಗಲೆಲ್ಲ ಕತ್ತೆ ಮೇಲೆ ಮೇಲೆ ಬರತೊಡಗಿ ಕೊನೆಗೆ ಗುಂಡಿ ಮುಚ್ಚುವ ಹಂತಕ್ಕೆ ಕತ್ತೆ ಸಂಪೂರ್ಣ ಮೇಲೆ ಬಂದು ಚಂಗನೆ ಜಿಗಿದು ಹೊರಬಂದು ರೈತನಿಗೆ " ಅಯ್ಯಾ ರೈತ ನಿನಗೆ ನಾನು ಅಷ್ಟು ಸಹಾಯ ಮಾಡಿರುವೆ ನೀನು ಅದನ್ನೆಲ್ಲಾ ಮರೆತು ನನ್ನನ್ನು ಬಿಟ್ಟುಹೋಗಲು ನಿರ್ಧರಾ ಮಾಡಿದ್ದಿ ಇದು ಸರಿಯಾ ನಿನಗೂ ವಯಸ್ಸಾಗಿದೆ ನಿನ್ನ ಮಕ್ಕಳು ಇದೇ ರೀತಿ ನಿನ್ನನ್ನು ಕಾಡಿಗೆ ಬಿಟ್ಟರೆ ಏನು ಮಾಡುವೆ ಎಂದಿತು. ಆಗ ರೈತನಿಗೆ ತನ್ನ ತಪ್ಪಿನ ಅರಿವಾಗಿ ಕತ್ತೆಯನ್ನು ತನ್ನ ಜೊತೆಗೆ ಕರೆದುಕೊಂಡು ವಾಪಾಸ್ಸು ಮನೆಗೆ ತೆರಳಿ ಕತ್ತೆಯನ್ನು ಜತನದಿಂಧ ನೋಡಿಕೊಂಡನು



– ಬಿ.ನವೀನರೆಡ್ಡಿ, 9 ನೆತರಗತಿ
ಸರ್ಕಾರಿ ಪ್ರೌಢಶಾಲೆ ಗದ್ದಿಕೆರೆ, ಹ.ಬೊ.ಹಳ್ಳಿ ತಾಲ್ಲೂಕು

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಈಗ ಬೆಳಕಿನ ಕಾರ್ತಿಕ ಆಗ ಬಾಂಧವ್ಯದ ಕಾರ್ತಿಕ

ನನ್ನೂರಿನಲ್ಲಿ ಯಾವುದೇ ವಿಶೇಷಗಳು ನಡೆದರು ಹನುಮಂತಮ್ಮ ಅಂತಾ ಅಜ್ಜಿ ಇದ್ದರು.ಅವರು ಇಡಿ ಊರೆಲ್ಲ ಸುತ್ತಾಡಿ ಕೇಳ್ರೋಪ್ಪೋ ಕೇಳಿ ನಾಳೆ ಊರಾಗ ಇಂತದ್ದ ಕಾರ್ಯಕ್ರಮ ಐತಿ,ಹಬ್ಬ ಐತಿ,ಅಮ್ಮನ ಮಾಡ್ತ ಇದಾರೆ,ಅಂತಾ ಕೂಗಿ ಹೇಳ್ತ ಇದ್ದಳು.ಊರಾಗ ಇದಕ್ಕೆಲ್ಲ ಸಾರ ಹಾಕೋದು ಅಂತಿದ್ದರು.ಅಂದರೆ ಇಡಿ ಊರಿಗೆ ಸಾರ ಸಗಟಾಗಿ ಕೇಳುವಂತೆ ಹೇಳುವುದು .ಊರೆಲ್ಲ ಸಾರ ಹಾಕ್ತ ಬಂದ ಅಜ್ಜಿಯ ಧ್ವನಿ ಸ್ವಲ್ಪ ಕೀರಲು ತನದಿಂದ ಕೂಡಿದಾಗ .ಕೆಲವರು ಹೇ ಮುದುಕಿ ನೀನ ಏನ್ ಹೇಳ್ತ ಇದಿಯ ಕೇಳ್ತ ಇಲ್ಲ ಅಂತಾ ನಕಲಿ ಮಾಡ್ತ ಇದ್ದರು.ಆಗ ಒಮ್ಮೆಗೆ ಸಿಟ್ಟೇರುತ್ತಿದ್ದ ಅಜ್ಜಿ ಇಡಿ ಊರಿಗೆಲ್ಲ ಕೇಳತೈತಿ,ನೀನು ದಾಸಪ್ಪಗ ಕೇಳಿಲ್ಲ ಅಲ್ಲ,ಕಿವಿ ನೆಟ್ಟಾಗ ಮಾಡ್ಯಾಕ ಅಂತಿದ್ದಳು, ಕೆಲವೊಬ್ಬರು ಇಕಿ ನಮ್ಮ ಓಣಿಗೆ ಬಂದ ಸಾರ ಹಾಕಿಲ್ಲ ಅಂತಿದ್ದರು. ಇಲ್ಲಿ ಊರಮುಂದೆ ಬಂದ ಬಿಡಿ ಹಚ್ಚಗೆಂಡ ಕುಂತರ ನಾನು ಸಾರ ಹಾಕಿದ್ದು ಎಲ್ಲಿ ಕಾಣತೈತಿ ನಿನಗ ಅಂತಾ ಬೈತಿದ್ದಳು.

ಈ ಕಾರ್ತಿಕ ಮಾಸ ಬಂದಾಗ ಪ್ರತಿದಿನ ಊರ ಹನುಮಂತ ದೇವರಿಗೆ ಯಾರು ಕಾರ್ತಿಕ ಹಚ್ಚೋದು ಅಂತಾ ಅಜ್ಜಿ ಸಾರ ಹಾಕ್ತ ಇದ್ದಳು. ಒಂದೊಂದು ದಿನ ಒಂದು ಮನೆತನ,ಅಥಾವ ಕುಟುಂಬ ದವರು ಅಥಾವ ಮತ್ತೊಂದು ದಿನ ನಾಲ್ಕೈದು ಕುಟುಂಬಗಳು ಸೇರಿ ಕಾರ್ತಿಕ ಹಚ್ಚತ್ತ ಇದ್ದರು.ನಮಗೆ ಕಾರ್ತಿಕ ಹಚ್ಚೋದ ಅಂದ್ರ ದೀಪಾ ಹಚ್ಚೋದೊ ಅನ್ನೋ ಖುಷಿಗಿಂತ .ಕಾರ್ತಿಕ ಹಚ್ಚೋ ಮನೆಯವರು ಕೊಡೋ ಪ್ರಸಾದ.ಅಂದರೆ ಒಣಮಂಡಕ್ಕಿ,ಹಸಿ ಕೊಬ್ಬರಿ,ಬೆಲ್ಲ,ಪುಟಾಣಿ ಎಲ್ಲವನ್ನು ಕಲಸಿ ಕೊಡ್ತ ಇದ್ದರು.ಅದು ತುಂಬ ವಿಶೇಷವಾದದು.ಕಾರ್ತಿಕ ಮಾಸದಲ್ಲಿ ಸಂಜೆ ಹನುಮಂತ ದೇವರಗುಡಿ ತುಂಬ ಹುಡುಗರ ಸಡಗರ ಸಂಭ್ರಮ.ಹನುಮಂತ ದೇವರ ಗುಡಿಗೆ ಊರಿನ ಇನ್ನುಳಿದ ಗುಡಿಗಳಾದ ಮಾರೆಮ್ಮ ದೇವಿ,ಚೌಡಮ್ಮ ದೇವಿ.ಬಸನದೇವ್ರು, ಪೂಜಾರಿಗಳು ಬರ್ತಾ ಇದ್ದರು.ಅವತ್ತು ಕಾರ್ತಿಕ ಹಚ್ಚುವ ಮನೆಯವರು. ಆ ದೇವರಿಗಳಿಗೂ ಎಣ್ಣೆ,ಬತ್ತಿ, ಪ್ರಸಾದವನ್ನು ಕೊಡ್ತ ಇದ್ದರು. ಹನುಮಂತ ದೇವರಗುಡಿ ಅಂಗಳ ವಿಶಾಲವಾಗಿತ್ತು. ಜೊತೆಗೆ ಕೂಡಲು ಕಲ್ಲುಬಂಡೆಯ ಹಾಸುಗಳು ದೊಡ್ಡದಿದ್ದವು. ಜೊತೆಗೊಂದು ದೊಡ್ಡದಾದ ಆಲದ ಮರವಿತ್ತು. ಹನುಮಂತ ದೇವರ ಗುಡಿಯಲ್ಲಿ ಕಾರ್ತಿಕ ಹಚ್ಚಿದ ಮೇಲೆ ಗಂಟೆ ಜಾಗಟೆಗಳ ಜೋರಾಗಿ ಬಡಿದ ಮೇಲೆ ಈ ಪ್ರಸಾದ ವ್ಯವಸ್ಥೆ ಜೋರಾಗಿ ನಡಿತ್ತಿತ್ತು.





ಕೊಟ್ರೇಶ ಅಕ್ಕಿ
ಉಪನಾಯಕನಹಳ್ಳಿ ಬಿಡಿಸಿಸಿ ಬ್ಯಾಂಕ್

Hampi Times E-paper
SCAN AND READ

ಈ ಪ್ರಸಾದ ತಯಾರು ಮಾಡ್ತಿದ್ದವರು ಕೂಡ ಆ ಮನೆಯವರು ಜೊತೆಗೆ ದೈವದ ಕಾರ್ಯದಲ್ಲಿ ಭಾಗವಹಿಸುತ್ತಿದ್ದ ಹಿರಿಯರು. ನಮಗೋ ಯಾವಾಗ ಪ್ರಸಾದ ಕೊಡ್ತಾರೋ ಅನ್ನೋ ಹಂಬಲ ಆಸೆ ಹುಡುಗರಿಗೆ, ಈ ಹನುಮಂತಜ್ಜಿ ಮಾತ್ರ ಅದೆಷ್ಟು ಹುಡುಗರ ಪಾಲಿಗೆ ವಿಲನ್ ಆಗಿದ್ದಳು.ಗಲಾಟೆ ಮಾಡುವ. ಚೇಷ್ಟೆ ಮಾಡುವ ಹುಡಗರ ಪಟ್ಟಿ ಮಾಡಿ ಅವರಿಗೆ ತಡವಾಗಿ ಕೊಡುವುದು.ಅಥಾವ ಗದರುವುದು ಈಕೆಗೆ ರೂಡಿಗತವಾಗಿತ್ತು. ಪ್ರಸಾದ ತಂದ ಮನೆಯವರು ಬೆಲ್ಲ ಅಥಾವ ಕೊಬ್ಬರಿ ಬಟ್ಟಲು ಕಡಿಮೆ ತಂದಾಗ "ವರ್ಷಕ್ಕೊಮ್ಮೆ ಕಾರ್ತಿಕ ಹಚ್ಚೋದಪ್ಪ ಎಲ್ಲನು ಅಡವಾಗಿ ತರಬೇಕು, ಹುಡುಗರು ಬಾಳ ಐದಾವ ಇನ್ನೊಂದ ನಾಲ್ಕ ಕಾಯಿ, ಸ್ವಲ್ಪ ಬೆಲ್ಲ ತರಸಬದೇಪ್ಪ ಅಂತಿದ್ದಳು. ಹುಡುಗರ ಪರ ಅಜ್ಜಿ ವಕಾಲತ್ತು ವಹಿಸಿ ಮಾತಾನಾಡುತ್ತಿದ್ದು ಎಳೆಯ ವಯಸ್ಸಿನ ನಮಗೆ ಗೊತ್ತಾಗತ್ತಿರಲಿಲ್ಲ.

ಅಜ್ಜಿಯ ಸೀರೆಯ ಸೆರಗಿಗೆ ಕೊಬ್ಬರಿ ಬಟ್ಟಲು ಹಾಕಿಕೊಂಡಿದ್ದನ ಅದೊಮ್ಮೆ ಗೆಳೆಯನೊಬ್ಬ ನನಗೆ ತೋರಿಸಿ.ನೋಡು ಆ ಹನುಮಂತಜ್ಜಿ ಹೀಗೆ ಮಾಡ್ತಾಳೆ ಅಂತಾ ಸಿಸಿಬಿ ಪೋಲಿಸರಂತೆ ಪತ್ತೆಹಚ್ಚಿ ತೋರಿಸಿದ್ದ. ಮಂಡಕ್ಕಿ ಕೊಬ್ಬರಿ ಆಸೆಗೆ ಹುಡುಗರು ಬೊಗಸೆಗಿಂತ ಹೆಚ್ಚಿ ಹಾಕಿಸಿಕೊಂಡು ಗುಡಿಯ ತುಂಬ ಚೆಲ್ಲಾಪಿಲ್ಲಿ ಅಥಾವ ಶುರ ಮಾಡ್ತ ಇದ್ದವಿ.ಪ್ರಸಾದ ಲೋ ಅದು ಚೆಲ್ಲಬೇಡಿ ನಾಸಿಂಗೇಡಿಗಳ ಅಂತಿದ್ದಳು.ಆಕೆಯನ್ನ ಅಣುಕಿಸುವ ಗೆಳೆಯರಿಗೇನು ಕಡಿಮೆ ಇರಲಿಲ್ಲ.ಆಗ ಯಾವನಲೋ ನನ್ನ ಅಣಿಸಿದ್ದು ಅಂತ ಸಿಟ್ಟಾಗತ್ತಿದ್ದಳು. ಇಷ್ಟೆಲ್ಲ ಆಸೆಪಟ್ಟು ತನ್ನು ಸೆರಗು ,ಚೀಲಕ್ಕೆ ಕಾರ್ತಿಕ ಹಚ್ಚಿದ ಪ್ರಸಾದ ಮನೆಗೆ ಹೊಯ್ಯುತ್ತಿದ್ದ ಅಜ್ಜಿ ಅಡಿಕೆ.ಎಲಿ ಅಷ್ಟಾ ಬಿಟ್ಟು ಅಲ್ಲಿನ ಎಲ್ಲರಿಗೂ ಹಂಚಿ ಬಿಡ್ತಾ ಇದ್ದಳು. ಅಂತಾ ಆಕೆಯ ಬಲ್ಲವರು ಹೇಳ್ತ ಇದ್ದರು.

ಆಗೆಲ್ಲ ಕಾರ್ತಿಕ ಮಾಸದಲ್ಲಿ ಈಗಿನಷ್ಟು ಪ್ರಣತಿ ತಂದು ಇಡಿ ದೇವಸ್ಥಾನವೆಲ್ಲ ಬೆಳಕಿನಿಂದ ಕೂಡುವಂತೇನು ಮಾಡ್ತ ಇರಲಿಲ್ಲ. ಅಲ್ಲಲ್ಲಿ ಒಂದೊಂದು ಪ್ರಣತಿ ಹಚ್ಚಿ ಕಾರ್ತಿಕವನ್ನ ಸಂಭ್ರಮಿಸುತ್ತ ಇದ್ದರು. ಆಗಿನ ಕಾರ್ತಿಕ ಈಗಿನಷ್ಟು ಬೆಳಕು ಕೊಡ್ತ ಇರಲಿಲ್ಲ ಆದರೆ ನಮ್ಮೆಲ್ಲರೊಳಗೆ ಬಾಂಧವ್ಯ ಬೆಸೆದಿತ್ತು. ಇತ್ತಿಚಿನ ದಿನಗಳಲ್ಲಿ ಕೆಲವೊಂದು ದೇವಸ್ಥಾನದಲ್ಲಿ ಕಾರ್ತಿಕ ಹಚ್ಚುವ ಭಕ್ತರು ಇಡಿ ದೇವಸ್ಥಾನದ ಅಂಗಳವೆಲ್ಲ ಎಣ್ಣೆಮಯ ಆಗುವಂತೆ ಎಣ್ಣೆಯನ್ನು ಹರಿದು ಹೋಗುವಷ್ಟು ಚೆಲ್ಲಿರುತ್ತಾರೆ. ಅಲ್ಲೆ ಪಕ್ಕದಲ್ಲಿ ಇರುವ ಡಬ್ಬಿಗಳಲ್ಲಿ ಎಣ್ಣೆ ಹಾಕಿದರೆ, ಅದೇ ದೇವಸ್ಥಾನದಲ್ಲಿ ಮುಂದಿನ ದಿನಗಳಲ್ಲಿ ಅವರು ತಂದ ಎಣ್ಣೆಯ ದೇವರಿಗೆ ದೀಪಾವಾಗಿ ಊರಿಯುತ್ತದೆ.. ಆಗಾಗಿ ಕಾರ್ತಿಕ ಮಾಸದಲ್ಲಿ ನಾವು ಹಚ್ಚುವ ಹಣತೆ ಜಗದ, ಮನದ ಅಂಧಕಾರವ ಅಳಿಯಲಿ. ಜ್ಞಾನದ, ಭಕ್ತಿಯ ಬೆಳಕನ್ನ ಪಸರಿಸಲಿ. ಬದುಕಿಗೆ ಬಾಂಧ್ಯವ, ಭರವಸೆ ತರಲಿ.ನಿನ್ನೆ ಬ್ಯಾಂಕಿನಲ್ಲಿ ದೇವಿಗುಡಿಯ ಮುಂದಗಡೆ ಕಾರ್ತಿಕ ಹಚ್ಚಿದ ಮೇಲೆ ಮಂಡಕ್ಕಿ ಬೆಲ್ಲದ ಪ್ರಸಾದ ನೀಡಿದರು. ಮಂಡಕ್ಕಿ, ಬೆಲ್ಲ ಮೇಯುತ್ತಿದ್ದು ಮಾತ್ರ ಬಾಯಿ. ಆದರೆ ಮನಸ್ಸು ಮಾತ್ರ ಒಮ್ಮೆಗೆ ಬಾಲ್ಯಕ್ಕೆ ಹೋಗಿ ಎಲ್ಲವನ್ನು ಮೆಲುಕು ಹಾಕಿತು.

# ಸರಳ ಜೀವನ

ಸರಳ ಜೀವನ" ಎನ್ನುವುದು ಇಂದು ವಿಡಂಬನೆಯ ವಿಚಾರವಾಗಿದೆ. ಸರಳವಾಗಿ ಜೀವಿಸುವವರು ಹಾಸ್ಯಸ್ಪದ ವ್ಯಕ್ತಿಗಳಾಗಬಹುದು, ಏಕೆಂದರೆ ಹಣವಂತರು ಸರಳವಾಗಿದ್ದರೆ ಅವನು ಜಿಪುಣ, ಅವನದ್ದು ಜುಗ್ಗತನ ಎಂದು ಆಡಿಕೊಳ್ಳುತ್ತಾರೆ. ಹಾಗೆಯೇ ಬಡವರು ಸರಳ ಜೀವನವನ್ನು ಮೈಗೂಡಿಸಿಕೊಂಡರೆ, ಗತಿ ಇಲ್ಲದವರು ಎಂದು ಅವಹೇಳನ ಮಾಡುತ್ತಾರೆ.

ಆದರೆ ಸರಳ ಜೀವನ ಎನ್ನುವುದು ಪ್ರತಿಯೊಬ್ಬರಿಗೂ ಬಹಳ ಅವಶ್ಯಕವಾದ ವಿಚಾರವೇ ಆಗಿದೆ. ಏಕೆಂದರೆ ಸರಳ ಜೀವನವು ಸುಲಭ ಜೀವನವೂ ಆಗಿದೆ. ಜೊತೆಗೆ ಯಾವುದೇ ಹೆಚ್ಚಿನ ಒತ್ತಡಗಳಿಗೆ, ತೊಂದರೆಗಳಿಗೆ ಅವಕಾಶವಿಲ್ಲದೆ ನೆಮ್ಮದಿಯಾಗಿ ಬದುಕುವ ದಾರಿಯೂ ಆಗಿದೆ. ಇನ್ನೊಬ್ಬರನ್ನು ಮೆಚ್ಚಿಸಿ ಬದುಕುವುದು ಯಾವ ಕಾಲದಲ್ಲಿಯೂ ಸಾಧ್ಯವಿಲ್ಲ. ಎಲ್ಲರಿಗೂ ಎಲ್ಲದರಲ್ಲಿಯೂ ಕೊರತೆಯೇ ಕಂಡು ಬರುತ್ತದೆ. ಆದರೆ ನಮ್ಮ ಆತ್ಮ ಸಾಕ್ಷಿಗೆ ನಾವು ಮಾಡುತ್ತಿರುವ ಕೆಲಸ, ನಮಗೆ ತೃಪ್ತಿ ನೀಡಿದ್ದರೆ, ಅದರಿಂದ ಯಾರಿಗೂ ತೊಂದರೆಯಾಗದಿದ್ದರೆ, ನಮ್ಮ ಸರಳ ಜೀವನವನ್ನು ನಾವು ಹೆಮ್ಮೆಯಿಂದ ಹಾಗೂ ಉತ್ಸಾಹದಿಂದಲೇ ಮುಂದುವರಿಸಬಹುದು.

ನಮ್ಮಲ್ಲಿರುವ ಹಣವನ್ನು ಖರ್ಚು ಮಾಡಲು, ಸಮಾಜಕ್ಕೆ ಸಂಪತ್ತು ಹಂಚಲು, ಆಡಂಬರ ಪ್ರತಿಷ್ಠೆಗಳೇ ಬೇಕೆಂದಿಲ್ಲ. ನಮ್ಮ ಹಣವನ್ನು ಒಳ್ಳೆಯ ಕೆಲಸಗಳಿಗೆ ವಿನಿಯೋಗಿಸಲು ಹಲವಾರು ಮಾರ್ಗಗಳಿವೆ. ಬಡ ಮತ್ತು ಅನಾಥ ಮಕ್ಕಳ ವಸತಿ ನಿಲಯ, ವೃದ್ಧಾಶ್ರಮ, ಬಡ ಮಕ್ಕಳ ಶಿಕ್ಷಣ, ಬಡವರ ಕಲ್ಯಾಣಕ್ಕಾಗಿ, ಹೀಗೆ ಸಮಾಜದ ಒಳಿತಿಗಾಗಿ ನಮ್ಮ ಹಣವನ್ನು ವಿನಿಯೋ ಗಿವಸಬಹುದು.

ಅದ್ದೂರಿ ವಿವಾಹಗಳು, ದೊಡ್ಡ ದೊಡ್ಡ ಕಾರ್ಯಕ್ರಮಗಳಲ್ಲಿ ಸಂಪತ್ತಿನ ಹಂಚಿಕೆ ಆದರೂ, ಅವು ಅವಶ್ಯಕತೆ ಇರುವವರಿಗೆ ಸಂದಾಯ ಆಗುವುದು ಕಷ್ಟಕರ ಹಾಗೆಯೇ ಹಣ ಪೋಲಾಗುವ ಸಾಧ್ಯತೆಯೂ ಇರುತ್ತದೆ. ಹಾಗಾಗಿ



ಅದ್ದೂರಿತನಕ್ಕಿಂತಲೂ, ದಾನ ಧರ್ಮ ಎಲ್ಲಾ ಕಾಲಕ್ಕೂ ಶ್ರೇಷ್ಠವೆನಿಸುತ್ತದೆ. ಹಾಗೆಂದು ದಾನ ಧರ್ಮ ಮಾಡಲು ಶ್ರೀಮಂತಿಕೆ, ಆರ್ಥಿಕ ಸಬಲತೆಯು ಎಲ್ಲಾ ಕಾಲಕ್ಕೆ ಮುಖ್ಯವಾಗುವುದಿಲ್ಲ. ಶ್ರೀಮಂತರು ಹೆಚ್ಚು ಹಣವನ್ನು ಸಹಾಯ ಮಾಡಬಹುದಾದರೆ, ಬಡವರು ಸಣ್ಣ ಮೊತ್ತದ ಸಹಾಯ ಮಾಡಬಹುದು. ಒಟ್ಟಿನಲ್ಲಿ ಮನಸ್ಸಿರಬೇಕು ಅಷ್ಟೇ.

ಸರಳತೆ ಎಂಬುದು ದೊಡ್ಡ ದೊಡ್ಡ ವಿಚಾರಗಳಲ್ಲಿಯೇ ಇರುವುದಿಲ್ಲ. ಉದಾಹರಣೆಗೆ ಮನೆಯಲ್ಲಿ ವಾಹನವಿದ್ದರೂ ಕೂಡ, ಹತ್ತಿರದ ಅಂಗಡಿಗಳಿಗೆ ಕೆಲಸ ಕಾರ್ಯಗಳಿಗೆ ನಡಿಗೆಯಲ್ಲಿ ಕ್ರಮಿಸಬಹುದಾದ ದೂರವನ್ನು ನಡೆದು ಹೋಗುವುದು ಕೂಡ ಸರಳತೆಯೇ. ದುಬಾರಿ ಬಟ್ಟೆಗಳನ್ನು ಖರೀದಿಸುವಲ್ಲಿ ಉತ್ತಮ ಗುಣಮಟ್ಟದ, ಕಡಿಮೆ ಹಣದ ಬಟ್ಟೆಯನ್ನು ಕೊಳ್ಳುವುದು ಸರಳತೆ ಆಗಿರುತ್ತದೆ. ಅನವಶ್ಯಕವಾದ ಖರ್ಚು ವೆಚ್ಚಗಳನ್ನು ನಿಯಂತ್ರಿಸುವುದು ಕೂಡ ಸರಳತೆಯ ವಿಧಾನವಾಗಿದೆ. ನಮಗೆ ಬೇಕಾದ ವಸ್ತುಗಳನ್ನು ಬೇಕಾದಷ್ಟೇ ಬಳಸುವುದು, ಸಾರ್ವಜನಿಕ ಹಣವನ್ನು ಸೌಲಭ್ಯಗಳನ್ನು ಇತಿಮಿತಿಯಲ್ಲಿ ಅವಶ್ಯಕತೆಗೆ ತಕ್ಕಂತೆ ಬಳಸುವುದು ಕೂಡ ಸರಳತೆಯಾಗಿದೆ.

ತೋರಿಕೆಗಾಗಿ ಮಾಡುವ ಎಲ್ಲಾ ಕೆಲಸಗಳು ಆಡಂಬರವೇ ಆಗಿರುತ್ತದೆ. ನಮಗೆ ಸರಳವಾಗಿರುವುದು ಇಷ್ಟವಾದಲ್ಲಿ, ನಾವು ಶ್ರೀಮಂತರೇ ಇರಬಹುದು, ಬಡವರೇ ಇರಬಹುದು ನಮ್ಮ ಇಚ್ಛೆಯಂತೆ ನಾವು ಸರಳವಾಗಿಯೇ ಇರಬಹುದು. ಇನ್ನೊಬ್ಬರು ಏನೆನ್ನುತ್ತಾರೆಯೋ ಎಂದು ನಾವು ನಮಗೆ ಇಷ್ಟವಿಲ್ಲದ ಕೆಲಸವನ್ನು ಮಾಡುವುದು ತರವಲ್ಲ. ಅದು ಸರಳತೆಯೇ ಇರಬಹುದು, ಆಡಂಬರದ ಖರ್ಚು ವೆಚ್ಚಗಳೆ ಇರಬಹುದು. ಇಷ್ಟೆಲ್ಲಾ ಆಸ್ತಿ ಪಾಸ್ತಿ ಇದ್ದರೂ ಖರ್ಚು ಮಾಡಲು ಜುಗ್ಗತನ ತೋರಿಸುತ್ತಾರೆ ಎಂಬ ಅಪವಾದದಿಂದ ತಪ್ಪಿಸಿಕೊಳ್ಳುವ ಸಲುವಾಗಿ ಅದ್ದೂರಿತನ ಮಾಡುವುದು ಕೂಡಾ ಒಳ್ಳೆಯದಲ್ಲ.

ಅದರಲ್ಲೂ ಬೇರೆಯವರನ್ನು ನೋಡಿ ನಾವು ಅತಿಯಾದ ಖರ್ಚು ಮಾಡುವುದು, ಬೇಕು ಬೇಡವಾದ ಎಲ್ಲಾ ವಸ್ತುಗಳನ್ನು ಖರೀದಿಸುವುದು, ಸಾಲ ಮಾಡಿಯಾದರೂ ತುಪ್ಪ ತಿನ್ನುವ ಮನೋಭಾವ ಇತ್ಯಾದಿ ನಮ್ಮನ್ನು ಒಂದಲ್ಲ ಒಂದು ದಿನ ಸಂಕಷ್ಟಕ್ಕೆ ಈಡು ಮಾಡುತ್ತದೆ. ಹಾಗಾಗಿ ಸರಳತೆ ಎನ್ನುವುದು ಎಂದಿಗೂ ನಮ್ಮ ಅಭ್ಯುದಯಕ್ಕೆ, ನೆಮ್ಮದಿಗೆ ಕಾರಣವಾಗುತ್ತದೆ. ಹಲವು ಬಾರಿ ನಮ್ಮ ಸರಳತೆ ನಮಗೆ ಗೊತ್ತಿಲ್ಲದೆ ಬೇರೆಯವರ ಅನುಕರಣೆಗೂ ಕಾರಣವಾಗುತ್ತದೆ. ಹಾಗಾಗಿ ನಮಗೆ ಸಾಧ್ಯವಿರುವ ಕಡೆಯಲ್ಲೆಲ್ಲಾ ಸರಳವಾಗಿ ಬದುಕುವುದು ಆದರ್ಶ ಪ್ರಾಯವೆನಿಸುತ್ತದೆ.



ಮಮತ ಶೃಂಗೇರಿ

Scan For Digital Colourful
HAMPI TIMES E-paper

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಅಕಾಲಮಳೆ ಅವಾಂತರ

ಬಿಸಿಲನು ಕಾಣದೆ ವಾರವು ಸಂದಿದೆ
ಮುಸುಕಿದೆ ಬಾನಲಿ ಮೋಡ
ಹಸಿರಿನ ಗಿಡದಲಿ ಮೊಗ್ಗುಗಳುದುರಿವೆ
ಕುಸುಮವು ಬಿರಿಯದೆ ನೋಡ


ಮಳೆಯನು ಸುರಿಸುತ ಕವಿದಿಹ ಮೇಘವು
ಚಳಿಯನು ದೂರಕೆ ಸರಿಸಿ
ಇಳೆಯಲಿ ರೈತರ ಬೆಳೆಗಳ ನಾಶವು
ಕುಳಿತರು ಕಂಬನಿ ಸುರಿಸಿ

ಗಾಳಿಯ ಹೊಡೆತಕೆ ಸಿಲುಕಿದ ಮರಗಳು
ದಾಳಿಯ ಸಹಿಸದೆ ಮುರಿದು
ಬೀಳುತಲಿರುವವು ಧರೆಯನು ಸೇರಿವೆ
ಬಾಳಿಗೆ ಕೊನೆಯನು ಎಳೆದು

ಹೂವನು ಬಿಡಲಿಹ ಸಮಯವು ಬಂದಿದೆ
ಮಾವಿಗೆ ನೋವನು ತಂತು
ನೋವಲಿ ಹಲಸಿದೆ ರುಚಿಕರ ಫಲವನು
ಜೀವಿಗೆ ನೀಡುವುದೆಂತು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಬಿಳಿ ಬೆಕ್ಕು



ಬಿಳಿಯ ಬಣ್ಣದ ಬೆಕ್ಕು
ಕುಳಿತಿದೆ ಅಡುಗೆಮನೆ ಹೊಕ್ಕು
ಇಟ್ಟಿರುವೆ ಹಾಲನು ನೆಕ್ಕು
ಇಳಿಯಲಿ ನಿನ್ನಯ ಸೊಕ್ಕು

ಚುಮುಚುಮು ಚಳಿಯಿದೆ ಹೊರಗೆ
ಬೆಚ್ಚಗೆ ನೀನಿರು ಒಳಗೆ
ಕೆಂಡವು ಹಾಕಿರಲು ಒಲೆಗೆ
ಕಾಯಿಸಲು ಹಿತವು ಮೈಗೆ

ತಿಳಿಯದು ನಿನ್ನಯ ನಡಿಗೆ
ಪಾತ್ರೆಯ ಉರುಳಿಸದಿರು ಕೆಳಗೆ
ಬೀಳಿಸು ಇಲಿಗಳ ಬಲೆಗೆ
ಬೇಟೆಯಾಡಿ ಬಾ ನನ್ನ ಬಳಿಗೆ

–ಚೇತನ ಭಾರ್ಗವ, ಬೆಂಗಳೂರು


### ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**06–12–2024 – ಶುಕ್ರವಾರ**

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಶ್ರಾವಣ |
| ಯೋಗ | : ಧ್ರುವ |
| ಕರಣ | : ಬಾಳವ |
| ಸೂರ್ಯೋದಯ | : 06:56:13 |
| ಸೂರ್ಯಾಸ್ತ | : 17:40:01 |
| ರಾಹು ಕಾಲ | : 10:58–12:18 |
| ಯಮಘಂಡ ಕಾಲ | : 14:59–16:20 |
| ಗುಳಿಕ ಕಾಲ | : 08:17–09:37 |

### ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 05–12–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.56 ಅಡಿ |
| ಒಳ ಹರಿವು | 3332 ಕ್ಯುಸೆಕ್ |
| ಹೊರ ಹರಿವು | 5254 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 92.424 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಇಂದಿನ ಮಟ್ಟ | 1592.37 ಅಡಿ |
| ಒಳ ಹರಿವು | 731 ಕ್ಯುಸೆಕ್ |
| ಹೊರ ಹರಿವು | 1959 ಕ್ಯುಸೆಕ್ |
| ಸಾಮರ್ಥ್ಯ | 13.126 ಟಿಎಂಸಿ |

# ಸಾಮರ್ಥ್ಯದ ಕೊರತೆಯೇ ಹೊರತು ಹಣೆಬರಹವಲ್ಲ!



ಬಹುತೇಕ ನಮ್ಮಲ್ಲಿ ನಮ್ಮ ಸಾಮರ್ಥ್ಯದ ಬಗೆಗೆ ನಂಬಿಕೆ ಕಡಿಮೆ ಅಥವಾ ಇಲ್ಲವೇ ಇಲ್ಲ. ಎಲ್ಲದಕ್ಕೂ ಹಣೆಬರಹವೆಂದು ತಲೆಮೇಲೆ ಕೈಹೊತ್ತು ಕುಳಿತುಕೊಳ್ಳುವುದೇ ಹೆಚ್ಚು. ಪ್ರತಿ ಕೆಲಸ ಕಾರ್ಯಗಳಿಗೆ ನಮ್ಮ ಕಾರ್ಯಕ್ಷಮತೆ ಮುಖ್ಯವೇ ಹೊರತು ಅದೃಷ್ಟವಲ್ಲ. ಕೈಲಾಗದೇ ಮೈಯೆಲ್ಲಾ ಪರಚಿ ಕೊಂಡರು ಎಂಬಂತೆ ಅನೇಕ ಬಾರಿ ನಮ್ಮ ಸೋಲುಗಳು ನಮ್ಮ ದುರಾದೃಷ್ಟದಿಂದ ಮತ್ತು ಹಣೆಬರಹದಿಂದ ಉಂಟಾಗುವುದಿಲ್ಲ. ಕರ್ತವ್ಯಪ್ರಜ್ಞೆಯ ಹಾಗೂ ಸಮಯದ ಪ್ರಜ್ಞೆಯ ಸೋಲಿನಿಂದ. ನಾವು ದೈಹಿಕ, ಬೌದ್ಧಿಕ ಮತ್ತು ಮಾನಸಿಕ ಸಾಮರ್ಥ್ಯದ ಮೇಲೆಯೇ ಅವಲಂಬಿತರಾಗಿ ಬದುಕು ನಡೆಸಬೇಕು. ನಮ್ಮಲ್ಲಿ ಅಸಾಧಾರಣವಾದ ಸಾಮರ್ಥ್ಯವಿದೆ. ಅದನ್ನು ನಾವೆಲ್ಲಾ ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಯಾವಾಗಲೂ ಇನ್ನೊಬ್ಬರನ್ನು ನಂಬಿಕೊಂಡು ಅಥವಾ ಹಣೆಬರಹ ಸರಿಯಿಲ್ಲವೆಂದು ಜೀವನ ನಡೆಸಲಾದೀತೆ? ಗುರಿ ಮುಟ್ಟಲು ಬೇಕಾಗಿರುವುದು ಗಟ್ಟಿಸಾಮಾರ್ಥ್ಯ ವಿನಃ ಟೊಳ್ಳು ಹಣೆಬರಹವಲ್ಲ.

ಯಶಸ್ಸೆಂದರೆ ಅದು ಇಂದಿನ ಸಾಧನೆಯಲ್ಲ. ಇಂದಿನ ಯಶಸ್ಸು ಹಿಂದಿನ ಸಾಧನೆಯಾಗಿರುತ್ತದೆ. ಕೆಲವೊಮ್ಮೆ ಬೇರೆಯವರು ನಮ್ಮ ಸಾಮರ್ಥ್ಯದ ಮೇಲೆ ಅಪನಂಬಿಕೆ ಬಿತ್ತುತ್ತಾ 'ನಿನ್ನ ಕೈಲಿ ಇದಾಗುವುದಿಲ್ಲ, ವೃತಾ ತೊಂದರೆ ಏಕೆ ತೆಗೆದುಕೊಳ್ಳುತ್ತಿಯಾ?' ಎಂದು ನಮ್ಮನ್ನು ನಿರುತ್ಸಾಹಿಗಳಾಗಿಸುತ್ತಾರೆ. ಇಂಥವರ ಮಾತುಗಳನ್ನು ಸುಮ್ಮನೆ ಕೇಳಬೇಕಷ್ಟೆ, ಅನುಸರಿಸಬಾರದು.

ಭೂಮಿಯೊಳಗಿನ ಬೀಜ ದಿನಗಳೆದಂತೆ ಸಸಿಯಾಗಿ ಹೊರಬರುತ್ತದೆ, ರೆಕ್ಕೆ ಬಲಿಯುತ್ತಿದ್ದಂತೆ ಮರಿಹಕ್ಕಿ ಹಾರಲು ಪ್ರಯತ್ನಿಸುತ್ತದೆ. ಕಾಲುಗಳಲ್ಲಿ ಶಕ್ತಿ ಕಾಣಿಸಿಕೊಳ್ಳುತ್ತಿದ್ದಂತೆ ಮಗು ಎದ್ದುಬಿದ್ದು ನಡೆಯುತ್ತದೆ. ಇವೆಲ್ಲಾ ಸ್ವಸಾಮರ್ಥ್ಯದಲ್ಲಿ ಅಮೂಲಾಗ್ರವಾದ ನಂಬಿಕೆಗೆ ಸಾಕ್ಷಿ. ಹಾಗೆಯೇ ಹೊಲದಲ್ಲಿ ದುಡಿಯುವ ರೈತ, ಗಡಿಯನ್ನು ಕಾಯುವ ಸೈನಿಕ ಇಬ್ಬರಲ್ಲೂ ಸ್ವಸಾಮರ್ಥ್ಯದಲ್ಲಿ ಬಲವಾದ ನಂಬಿಕೆಯಿರುವುದರಿಂದ ಧೈರ್ಯ–ಶೂರತನದಿಂದ ಗಟ್ಟಿಯಾಗಿದ್ದಾರೆ.

ಸಮಾಜದೊಟ್ಟಿಗೆ ಬದುಕುತ್ತಿರುವಾಗ ಸಮಸ್ಯೆಗಳ ತಪ್ಪಿಸಲು ಸಿದ್ಧರಾಗಬೇಕು. ಸಮಸ್ಯೆಗಳಿಲ್ಲದ ಸಮಾಜವೇ ಇಲ್ಲ. ರಾಮನಿಗೆ ಹದಿನಾಲ್ಕು ವರ್ಷ ವನವಾಸ ಅನುಭವಿಸುವ ಕಷ್ಟ ಬಂದಾಗ ಹಿಂದೆ ಮುಂದೆ ಯೋಚನೆ ಮಾಡದೇ ಆತ ಒಪ್ಪಿಕೊಂಡು ಕಾಡಿಗೆ ಹೊರಟೇ ಬಿಟ್ಟ. ಇದು ಆತನ ಸಾಮರ್ಥ್ಯಕ್ಕೆ ಕೈಗನ್ನಡಿ. ಆತ ಎಂದಿಗೂ ಇದು ನನ್ನ ಹಣೆಬರಹವೆಂದು ಚಿಂತಿಸಲಿಲ್ಲ. ಕಾಡಿನುದ್ದಕ್ಕೂ ಬರುವ ಸಂಕಷ್ಟಗಳನ್ನೆಲ್ಲಾ ಸ್ವಸಾಮರ್ಥ್ಯದಿಂದ ಎದುರಿಸಿದನೇ ವಿನಃ ಪಲಾಯನವಾದಿ ಯಾಗಿರಲಿಲ್ಲ. ಅದೇರೀತಿ ಹನುಮಂತನ ಸಾಹಸದ ಕಥೆ ಎಲ್ಲರಿಗೂ ಗೊತ್ತು. ಲಂಕೆಯಲ್ಲಿದ್ದ ಸೀತೆಯನ್ನು ಕರೆತರುವ ಸಂದರ್ಭದಲ್ಲಿ ವಾನರರೆಲ್ಲಾ ಜಾಂಬವಂತನೊಂದಿಗೆ ಸಮುದ್ರದ ದಡದಲ್ಲಿ ನೆರೆದಿದ್ದರು. ಅಲ್ಲಿ ಲಂಕೆಗೆ ಹೋಗಿಬರುವ ಸಾಮರ್ಥ್ಯದ ಬಗೆಗೆ ಅವರವರಲ್ಲಿ ಪರೀಕ್ಷೆ ಶುರುವಾಗಿತ್ತು. ಸಮುದ್ರವನ್ನು ಹತ್ತು ಅಡಿ, ಐವತ್ತಡಿ, ನೂರಡಿ, ಸಾವಿರಅಡಿ ಹೀಗೆ ನಾನು ಹಾರಬಲ್ಲೆ ಎಂದು ಒಬ್ಬೊಬ್ಬ ವಾನರ ಹೇಳತೊಡಗಿದರು. ಆದರೆ ದೂರದಲ್ಲಿ ಹನುಮಂತ ಮಾತ್ರ ತನ್ನ ಸಾಮರ್ಥ್ಯದ ಚಿಂತನೆಯಲ್ಲಿ ಮುಳುಗಿದ್ದ. ಆತನನ್ನು ನೋಡಿದ ಜಾಂಬವಂತ ಹತ್ತಿರಕ್ಕೆ ಕರೆದು 'ಆಂಜನೇಯ ನೀನು ಇವರೆಲ್ಲರಿಗಿಂತ ಸಮುದ್ರವನ್ನು ಹಾರಿ ಲಂಕೆಗೆ ಹೋಗಿ ಸೀತೆಯನ್ನು ಕಂಡು ಬರುವ ಸಾಮರ್ಥ್ಯವಿದೆ' ಎಂದು ಪ್ರೋತ್ಸಾಹ ನುಡಿಗಳನ್ನಾಡಿದಾಗ, ತಕ್ಷಣ ಹನುಮಂತ ಯಾವ ಆಲೋಚನೆ ಮಾಡದೇ ಸಮುದ್ರೋಲಂಘನ ಮಾಡಿದನೆಂಬ ವಿಷಯ ನಮಗೆ ರಾಮಾಯಣದಿಂದ ತಿಳಿದುಬರುತ್ತದೆ. ಅಂದರೆ ಹಣೆಬರಹವನ್ನು ಪಕ್ಕಕ್ಕಿಟ್ಟು ಸ್ವಸಾಮರ್ಥ್ಯವನ್ನು ನಂಬಿ ಮುನ್ನುಗ್ಗಿದರೆ ಯಶಸ್ಸು ಖಂಡಿತ.

ಮುಂದಿನ ಬಾರಿ ನಾವು ಕಷ್ಟ, ಅಪಾಯ, ಸಮಸ್ಯೆ, ಹಣೆಬರಹ ಮುಂತಾದ ಮಾತುಗಳು ಕೇಳಿದಾಗ ಅದಕ್ಕೆ ಹೆದರದೇ ನಮ್ಮ ಸಾಮರ್ಥ್ಯದ ಬಗ್ಗೆ ಆತ್ಮವಿಶ್ವಾಸ ಬೆಳೆಸಿಕೊಂಡರೆ ರಾಮನಂತೆ, ಹನುಮಂತನಂತೆ ಗುರಿ ಮುಟ್ಟಲು ಸಾಧ್ಯವಿಲ್ಲವೆ? ಒಟ್ಟಾರೆ ಸಾಮಾರ್ಥ್ಯವೆಂಬುದು ಮೆಟ್ಟಿಲುಳಿದ್ದಂತೆ ಹಣೆಬರಹವೆಂಬುದು ಲಿಫ್ಟ ಇದ್ದಂತೆ. ಆಯ್ಕೆ ನಮ್ಮದು ಏನಂತೀರಾ ?



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper

# ಮಕ್ಕಳಿಗೆ ಜಂತುಹುಳು ನಿವಾರಣಾ ಮಾತ್ರೆ ಉಚಿತ

## ಡಿಸಿ ಎಂ.ಎಸ್.ದಿವಾಕರ್ ಹೇಳಿಕೆ । ಶಿಕ್ಷಕರು ಆರೋಗ್ಯ ಇಲಾಖೆಯೊಂದಿಗೆ ಕೈ ಜೋಡಿಸಿ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಪ್ರತಿ ಮಕ್ಕಳನ್ನು ಜಂತುಹುಳ ಮುಕ್ತರನ್ನಾಗಿಸಲು ಕಡ್ಡಾಯವಾಗಿ ಉಚಿತ ಮಾತ್ರೆ ವಿತರಣೆಗೆ ಆರೋಗ್ಯ ಇಲಾಖೆ ಜತೆಗೆ ಶಿಕ್ಷಕರು ಕೈಜೋಡಿಸಬೇಕೆಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಆರೋಗ್ಯ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನ ನಿಮಿತ್ತವಾಗಿ ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಗುರುವಾರ ಮಾತನಾಡಿದರು. ರಾಜ್ಯಾದ್ಯಂತ 2015–16 ನೇ ಸಾಲಿನಿಂದ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನವನ್ನು ಯಶಸ್ವಿಯಾಗಿ ಅನುಷ್ಠಾನಗೊಳಸಲಾಗುತ್ತಿದ್ದು, ಇದೇ ಡಿ.9 ರಂದು ಜಿಲ್ಲೆಯ ಎಲ್ಲಾ ಶಾಲಾ, ಕಾಲೇಜು ಹಾಗೂ ಅಂಗನವಾಡಿ ಕೇಂದ್ರಗಳ ಮುಖಾಂತರ 1 ರಿಂದ 19 ವರ್ಷದ ಎಲ್ಲಾ ಮಕ್ಕಳಿಗೆ ಜಂತುಹುಳು ನಿವಾರಣಾ ಮಾತ್ರೆಯನ್ನು ಉಚಿತವಾಗಿ ನೀಡುವ ಕಾರ್ಯಕ್ರಮ ವಿವಿಧ ಇಲಾಖೆಗಳ ಸಮನ್ವಯತೆ ಯಿಂದ ನಡೆಯಬೇಕು. ಈ ಮೂಲಕ ಜಿಲ್ಲೆಯ ಎಲ್ಲಾ ಮಕ್ಕಳನ್ನು ಜಂತುಹುಳು ಮುಕ್ತರನ್ನಾಗಿಸಲು ಪ್ರಮಾಣಿಕವಾಗಿ ಕಾರ್ಯ ನಿರ್ವಹಿಸ ಬೇಕೆಂದು ಸೂಚನೆ ನೀಡಿದರು.



ಬಳಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶಂಕರ ನಾಯ್ಕ ಮಾತನಾಡಿ, 2024ನೇ ಸಾಲಿನ (17ನೇ ಸುತ್ತಿನ) ರಾಷ್ಟ್ರೀಯ ಜಂತುಹುಳು ನಿವಾರಣಾ ದಿನವನ್ನು ಡಿಸೆಂಬರ್ 9 ರಂದು ಮತ್ತು ಮಾಪ್–ಅಪ್ ದಿನವನ್ನು ಡಿ. 16 ರಂದು ಹಮ್ಮಿಕೊಳ್ಳಲು ನಿಗದಿಪಡಿಸಲಾಗಿದೆ ಎಂದರು.

ಇದೇ ವೇಳೆ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ರವರು ಡಿ. 9 ರಂದು ನಡೆಯಲಿರುವ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದ ಪೋಸ್ಟರ್ ಬಿಡುಗಡೆಗೊಳಿಸಿದರು. ಈ ವೇಳೆ ಆರ್ ಸಿಹೆಚ್ ಅಧಿಕಾರಿ ಡಾ.ಜಂಬಯ್ಯ, ಕೊಪ್ಪಳದ ಕಿಮ್ಸ್ ನ ವೈದ್ಯ ಡಾ.ನಾರಾಯಣ, ಜಿಲ್ಲಾ ಕ್ಷಯರೋಗ ನಿರ್ಮೂಲ ನಾಧಿಕಾರಿ ಡಾ.ಭಾಸ್ಕರ್, ಮಕ್ಕಳ ರಕ್ಷಣಾ ಘಟಕದ ಅಧಿಕಾರಿ ಸುಭದ್ರಾ ಇತರರಿದ್ದರು.

# ಕಾರ್ಮಿಕರಿಗೆ ವಿವಿಧ ಯೋಜನೆಗಳ ಅರಿವು ಅಗತ್ಯ

## ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾಂತೇಶ ಎಸ್ ದರಗದ ಹೇಳಿಕೆ



**ಹಂಪಿ ಟೈಮ್ಸ್ ಕೊಪ್ಪಳ**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಾಯಿತ ಕಾರ್ಮಿಕರಿಗೆ ಮತ್ತು ಕಾರ್ಮಿಕ ಸಂಘಟನೆಗಳಿಗೆ ನೂತನ ತಂತ್ರಾಂಶದ ಮೂಲಕ ಇ–ಕಾರ್ಡ್ ಜನರೇಷನ್, ನೋಂದಣಿ, ನವೀಕರಣ, ವಿವಿಧ ಸೌಲಭ್ಯಗಳಿಗೆ ಅರ್ಜಿ ಸಲ್ಲಿಸುವಿಕೆ, ಎಸ್.ಎಸ್.ಪಿ. ಪೋರ್ಟಲ್ ಮೂಲಕ ಶೈಕ್ಷಣಿಕ ಸಹಾಯಧನಕ್ಕೆ ಅರ್ಜಿ ಸಲ್ಲಿಸುವಿಕೆ, ಮಂಡಳಿಯ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳ ಕುರಿತು ಕೊಪ್ಪಳ ಜಿಲ್ಲೆಯ ನಿರ್ಮಿತಿ ಕೇಂದ್ರದಲ್ಲಿ ಬುಧವಾರ ಹಮ್ಮಿಕೊಂಡ ಕಾರ್ಯಾಗಾರದ ಮೂಲಕ ಅರಿವು ಮೂಡಿಸಲಾಯಿತು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್ ದರಗದ ಅವರು ಕಾರ್ಯಾಗಾರಕ್ಕೆ ಚಾಲನೆ ನೀಡಿದರು. ಬಳಿಕ ಅವರು ಮಾತನಾಡಿ, ಮಾಲೀಕರು ಮತ್ತು ಕಾರ್ಮಿಕರ ಮಧ್ಯ ಪೂರಕವಾದ ಭಾವನೆಗಳಿರಬೇಕು. ಇಬ್ಬರಲ್ಲೂ ಪಾಲನೆಯ ಮನವಿರಬೇಕು, ಆಗ ಮಾತ್ರ ಕೆಲಸಗಳು ಚೆನ್ನಾಗಿ ನಡೆಯುತ್ತವೆ. ಕಾರ್ಮಿಕರಿಗಿರುವ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ತರಬೇತಿ >>4

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE READERS

Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)

Display Advertisements
Examples: Brand promotions, Product launches, Corporate announcements

Public Notices and Announcements
Examples: Tender notices, Government announcements, Legal notices, Obituaries

Recruitment Advertisements
Examples: Company job openings, Walk-in interviews, Recruitment drives

Health and Wellness Advertisements
Examples: Hospitals or clinics, Medical equipment, Health supplements

Educational Advertisements
Examples: College admissions, Coaching center promotions, Training programs

Event Advertisements
Examples: Cultural programs, Exhibitions, Concerts or festivals

Retail Advertisements
Examples: Sales or discounts, New store openings

Entertainment Advertisements
Examples: Movie releases, TV show promotions, Theater events

Political Advertisements
Campaigns or announcements related to political parties or candidates.

Real Estate Advertisements
Ads for buying, selling, or renting property.

Matrimonial Advertisements
Personal ads for seeking marriage alliances. Examples: Bride or groom profiles, Community-specific ads

Product Advertisements
Examples: Electronics, Automobiles, FMCG products

contact for more information
M: 94 48 63 30 38
Email:- hampitimes@gmail.com



Grow Your Business With Us
S.M.Traders & Services
Authorised Distributor for ATLAS COPCO Portable Screw Air Compressors for North Karnataka
Water Well and Non Water Well Applications
web: www.smtradersandservices.com
M: 9686663125 - 9686663132
Atlas Copco
Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

# ನಮಗೆ ಮತದಾರರೇ ದೇವರು : ಸಿ.ಎಂ

## ಗ್ಯಾರಂಟಿ ಪಡೆದದ್ದಕ್ಕೆ ಫಲಾನುಭವಿಗಳನ್ನು ಅವಮಾನಿಸುತ್ತಿರುವ ಬಿಜೆಪಿ–ಜೆಡಿಎಸ್ ಜನದ್ರೋಹಿಗಳು: ಸಿ.ಎಂ ಆಕ್ರೋಶ

**ಹಂಪಿ ಟೈಮ್ಸ್ ಹಾಸನ**

ನಮ್ಮ ಸರ್ಕಾರದ ಐದು ಗ್ಯಾರಂಟಿಗಳನ್ನು ಪಡೆದಿರುವುದಕ್ಕೆ ಫಲಾನುಭವಿಗಳನ್ನು ಅವಮಾನಿಸುತ್ತಿರುವ ಬಿಜೆಪಿ–ಜೆಡಿಎಸ್ ಪರಮ ಜನದ್ರೋಹಿಗಳು. ಯಾವುದೇ ಕಾರಣಕ್ಕೂ ನಾವು ಗ್ಯಾರಂಟಿಗಳನ್ನು ನಿಲ್ಲಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದರು.

ಹಾಸನದಲ್ಲಿ ನಡೆದ ಬೃಹತ್ ಜನಕಲ್ಯಾಣೋತ್ಸವ ಸಮಾವೇಶವದಲ್ಲಿ ಮಾತನಾಡಿದರು. ಡಾ.ರಾಜ್ ಅವರು ಅಭಿಮಾನಿ ದೇವರು ಎಂದು ಹೇಳುತ್ತಿದ್ದರು. ನಮಗೆ ಮತದಾರರ ಬಂಧುಗಳೇ ದೇವರು. ಉಪ ಚುನಾವಣೆಯಲ್ಲಿ ಮೂರಕ್ಕೆ ಮೂರೂ ಕ್ಷೇತ್ರದಲ್ಲಿ ಕಾಂಗ್ರೆಸ್ ಆಶೀರ್ವದಿಸಿದ್ದಕ್ಕೆ ಧನ್ಯವಾದ ಅರ್ಪಿಸಿದರು.

ಹಾಸನದ ಮಹಾನ್ ನಾಯಕರ ಮೊಮ್ಮಗ ನಿಖಿಲ್ ಕುಮಾರಸ್ವಾಮಿಯನ್ನು ಚನ್ನಪಟ್ಟಣದಲ್ಲಿ, ಮಾಜಿ ಮುಖ್ಯಮಂತ್ರಿ ಎಸ್.ಆರ್.ಬೊಮ್ಮಾಯಿ ಅವರ ಮೊಮ್ಮಗನನ್ನು ಈಗ್ಗಾಂವಿಯಲ್ಲಿ ಜನ ಸೋಲಿಸಿ ನಮಗೆ ಆಶೀರ್ವದಿಸಿದ್ದಾರೆ ಎಂದರು.

ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮುಖ್ಯಮಂತ್ರಿ ಆಗುವಷ್ಟು ಬಹುಮತ ಈ ರಾಜ್ಯದ ಜನರೆ ಯಾವತ್ತೂ ಕೊಟ್ಟಿಲ್ಲ. ಒಮ್ಮೆ ಕಾಂಗ್ರೆಸ್ ಬೆಂಬಲದಲ್ಲಿ ಮತ್ತೊಮ್ಮೆ ಬಿಜೆಪಿ ಬೆಂಬಲದಲ್ಲಿ ಮುಖ್ಯಮಂತ್ರಿ ಆದರು. ಬಳಿಕ ಎರಡೂ ಪಕ್ಷಗಳಿಗೆ ವಂಚಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಸುಭದ್ರ ಸರ್ಕಾರ ಕೊಟ್ಟಿದೆ. ಮಾತ್ರವಲ್ಲ ಕಾಂಗ್ರೆಸ್ ಸರ್ಕಾರ ಬಂದಾಗಲೆಲ್ಲಾಕೊಟ್ಟಮಾತುಉಳಿಸಿಕೊಂಡಿದ್ದೇವೆ. 2013 ರಲ್ಲಿ ಕೊಟ್ಟ ಮಾತಿನಂತೆ ಹಲವಾರು ಭಾಗ್ಯಗಳನ್ನು ಜಾರಿ ಮಾಡಿದೆವು. ಈ ಬಾರಿ ಐದಕ್ಕೆ ಐದೂ ಗ್ಯಾರಂಟಿಗಳ ಜೊತೆಗೆ ಪ್ರಣಾಳಿಕೆಯಲ್ಲಿ ಘೋಷಿಸಿದ ಎಲ್ಲಾ ಗ್ಯಾರಂಟಿಗಳನ್ನೂ ಈಡೇರಿಸುತ್ತಿದ್ದೇವೆ ಎಂದು ಒಂದೊಂದಾಗಿ ವಿವರಿಸಿದರು.

ಬಿಜೆಪಿಯಾಗಲಿ, ಜೆಡಿಎಸ್ ಆಗಲಿ ಕೊಟ್ಟ ಮಾತು ಉಳಿಸಿಕೊಳ್ಳಲಿಲ್ಲ. ಪ್ರಧಾನಿ ಮೋದಿ ಅವರ ಸರ್ಕಾರ ನಾವು ದುಡ್ಡು ಕೊಡ್ತೀವಿ ಅಂದರೂ ಅಕ್ಕಿ ಕೊಡಲಿಲ್ಲ. ಇಂಥಾ ಜನದ್ರೋಹಿ ಸರ್ಕಾರ ಬಿಜೆಪಿಯದ್ದು ಎಂದರು.

ನಾವು ಐದು ಗ್ಯಾರಂಟಿಗಳಿಗಾಗಿ 56 ಸಾವಿರ ಕೋಟಿ ರೂಪಾಯಿಯನ್ನು ರಾಜ್ಯದ ಜನರ ಖಾತೆಗೆ ನೇರವಾಗಿ ಹಾಕುತ್ತಿದ್ದೇವೆ. ಈ ಐದು ಗ್ಯಾರಂಟಿಗಳನ್ನು ಪಡೆಯುತ್ತಿರುವ ಫಲಾನುಭವಿಗಳನ್ನು ಅವಮಾನಿಸುತ್ತಿರುವ ಬಿಜೆಪಿ–ಜೆಡಿಎಸ್ ದೊಡ್ಡ ಜನದ್ರೋಹಿಗಳು ಎಂದರು.

ಕೇಂದ್ರದಲ್ಲಿ ಮಂತ್ರಿಯಾಗಿರುವ ಹೆಚ್.ಡಿ. ಕುಮಾರಸ್ವಾಮಿಯವರು ಮೇಕೆದಾಟು ವಿಚಾರದಲ್ಲಿ ಮೌನ ಆಗಿರುವುದು ಏಕೆ? ಬೆಂಗಳೂರಿನ ಜನತೆಗೆ ನೀರು ಬೇಕಾಗಿದೆ. ಕೊಡಿಸಲಿ ಎಂದು ಸವಾಲು ಹಾಕಿದರು.

ಮಾಜಿ ಪ್ರಧಾನಿ ದೇವೇಗೌಡರು ನನಗಿಂತ 15 ವರ್ಷ ಹಿರಿಯರು. ಅವರು ಅಷ್ಟೆ ಘನತೆಯಿಂದ ಮಾತಾಡಬೇಕಿತ್ತು. ಯಾವತ್ತೂ ಗರ್ವ ತೋರಿಸದ ನನಗೆ, "ಸಿದ್ದರಾಮಯ್ಯ ಅವರ ಗರ್ವಭಂಗ ಮಾಡ್ತೀನಿ" ಎಂದರು. ಇದನ್ನು ನೀವು ಒಪ್ಪಿಕೊಳ್ಳುತ್ತೀರಾ, ಸಹಿಸುತ್ತೀರಾ ಎಂದು



ಪ್ರಶ್ನಿಸಿದರು. ಈ ಪ್ರಶ್ನೆಗೆ ಪ್ರತಿಕ್ರಿಯಿಸಿದ ಜನತೆ ಯಾವುದೇ ಕಾರಣಕ್ಕೂ ಸಹಿಸಲ್ಲ ಎಂದು ಕೂಗಿದರು.

ಹಾಸನದ ಹೆಣ್ಣು ಮಕ್ಕಳು ಕಣ್ಣೀರಲ್ಲಿ ಕೈತೊಳೆಯುತ್ತಿದ್ದಾರೆ. ಕೇಂದ್ರ ಸರ್ಕಾರ ರಾಜ್ಯದ ರೈತರ ಪಾಲಿನ ಸಾಲದಲ್ಲಿ ಶೇ58 ರಷ್ಟನ್ನು ಕಡಿತಗೊಳಿಸಿದೆ. ಇದರಿಂದ ಹಾಸನದ ರೈತರು ಮತ್ತು ರಾಜ್ಯದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ರೈತರ ಮಗ ಎಂದುಕೊಂಡಿರುವ ಕುಮಾರಸ್ವಾಮಿಯವರು ಏಕೆ ಕೇಂದ್ರ ಸರ್ಕಾರವನ್ನು ಪ್ರಶ್ನಿಸುತ್ತಿಲ್ಲ. ನಬಾರ್ಡ್‌ನಿಂದ ಆಗಿರುವ ಅನ್ಯಾಯವನ್ನು ಕುಮಾರಸ್ವಾಮಿ ಅವರು ಏಕೆ ಸರಿಪಡಿಸುತ್ತಿಲ್ಲ? ಕಳೆದ ಹಣಕಾಸು ವರ್ಷದಲ್ಲಿ ಕೇಂದ್ರದಿಂದ ರಾಜ್ಯಕ್ಕೆ ಆಗಿರುವ 11 ಸಾವಿರ ಕೋಟಿ ರೂಪಾಯಿಯನ್ನು ರಾಜ್ಯಕ್ಕೆ ಕೊಡಿಸಲು ಬಿಜೆಪಿ–ಜೆಡಿಎಸ್ ಏಕೆ ಬಾಯಿ ಬಿಡುತ್ತಿಲ್ಲ ಎಂದು ಪ್ರಶ್ನಿಸಿದರು.

ರಾಜ್ಯಕ್ಕೆ, ರಾಜ್ಯದ ಜನರಿಗೆ ಆಗುತ್ತಿರುವ ಅನ್ಯಾಯ ಸರಿಪಡಿಸಲು ಕುಮಾರಸ್ವಾಮಿ ಅವರಿಗೆ ಮತ್ತು ಬಿಜೆಪಿ ಸಂಸದರಿಗೆ ಮುಖ್ಯಮಂತ್ರಿಗಳು ಸವಾಲು ಹಾಕಿದರು.

ದೇವೇಗೌಡರು ರಾಜಕೀಯವಾಗಿ ಒಕ್ಕಲಿಗ ನಾಯಕರನ್ನು ನಿರಂತರವಾಗಿ ಮುಗಿಸುತ್ತಿದ್ದಾರೆ. ಬಚ್ಚೇಗೌಡರು, ವೈ.ಕೆ.ರಾಮಯ್ಯ, ಬೈರೇಗೌಡರು, ಕೃಷ್ಣಪ್ಪ, ಚಲುವರಾಯಸ್ವಾಮಿ ಸೇರಿ ಎಷ್ಟು ಮಂದಿ ಒಕ್ಕಲಿಗ ನಾಯಕರನ್ನು ದೇವೇಗೌಡರು ರಾಜಕೀಯವಾಗಿ ಮುಗಿಸಿದರು. ಒಕ್ಕಲಿಗ ನಾಯಕರಾಗಿದ್ದ ಕೃಷ್ಣಪ್ಪ ಅವರು ಆಗಲೇ ಈ ಪಾಪದ ಹೊರೆಯನ್ನು ಹೊರಬೇಕಾಗುತ್ತದೆ ಎಂದು ದೇವೇಗೌಡರಿಗೆ ಹೇಳಿದ್ದರು. ಈಗ ಒಕ್ಕಲಿಗ ನಾಯಕ ಕೃಷ್ಣಪ್ಪ ಅವರ ಮಾತು ನಿಜವಾಗಿದೆ ಎಂದರು.

ನಾನು ಮತ್ತು ಜಾಲಪ್ಪ ಒಟ್ಟಾಗಿ ರಾಮಕೃಷ್ಣಹೆಗಡೆಯವರ ಬದಲಿಗೆ ದೇವೇಗೌಡರನ್ನು ಮುಖ್ಯಮಂತ್ರಿ ಮಾಡಿದೆವು. ಆಮೇಲೆ ನನ್ನನ್ನೇ ಪಕ್ಷದಿಂದ ಉಚ್ಚಾಟಿಸಿದರು ಎಂದು ಹಂತ ಹಂತವಾಗಿ ವಿವರಿಸಿದರು.

**ಹಾಸನ ಮತ್ತೆ ಕಾಂಗ್ರೆಸ್ ತೆಕ್ಕೆಗೆ:** ಕಾಂಗ್ರೆಸ್ ಸರ್ಕಾರ ಮಾತ್ರ ಸುಭದ್ರ ಸರ್ಕಾರ ಕೊಡಲು ಸಾಧ್ಯ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಹಾಸನ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಜಯಭೇರಿಗಳಿಸಲಿದೆ. ಇದು ಶತಸಿದ್ದ ಎಂದು ಭರವಸೆ ವ್ಯಕ್ತಪಡಿಸಿದರು.

# ವಿದ್ಯಾರ್ಥಿಗಳಿಂದ ಪ್ರಶ್ನೆಗಳ ಸುರಿಮಳೆ



**ಮೊದಲ ಪುಟದಿಂದ**

ಎಂದು ಮತ್ತು ಹೆಣ್ಣು ಭ್ರೂಣ ಹತ್ಯೆ, ಬಾಲ ನ್ಯಾಯ, ಪೋಕ್ಸೋ ಕಾಯ್ದೆಯ ಬಗ್ಗೆ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಗೆ ಇರುವ ಕಾನೂನುಗಳ ಬಗ್ಗೆ ತಿಳಿಯಲು ವಿದ್ಯಾರ್ಥಿಗಳು ವಿಧ ವಿದವಾದ ಪ್ರಶ್ನೆಯ ಸುರಿಮಳೆ ಗೈದರು.

ಮಕ್ಕಳ ಹಕ್ಕುಗಳ ನಿರ್ದೇಶನಾಲಯದ ನಿರ್ದೇಶಕರಾದ ಡಾ.ಎಂ.ಆರ್ ರವಿ ಅವರು ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸಿ, ಮಕ್ಕಳು ಯಾವಾಗ ಎಲ್ಲ ರಂಗದಲ್ಲಿ ಭಾಗವಹಿಸಿ ಅದರ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾರೋ ಅವಾಗ ಮಾತ್ರ ಅವರಿಗೆ ಸಂಪೂರ್ಣ ಜ್ಞಾನಾರ್ಜನೆಯಾಗುತ್ತದೆ. ಮಕ್ಕಳು ಸಮಾಜದಲ್ಲಿನ ಸಂಕಷ್ಟವನ್ನು ಎದುರಿಸಿ, ಉತ್ತಮ ವಿದ್ಯಾಭ್ಯಾಸ ಪಡೆಯಲು, ಕಾಯ್ದೆ ಕಾನೂನುಗಳನ್ನು ಮಾಡಿರುವುದು ಎಂದರು.

ಹೆಣ್ಣು ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಒಳಗಾದರೆ ಅಥವಾ ಒಳಗಾದ ತಮ್ಮ ಸ್ನೇಹಿತರ ಬಗ್ಗೆ ತಿಳಿದರೆ ಕೂಡಲೆ ಮಕ್ಕಳ ಸಹಾಯವಾಣಿಗೆ ಅಥವಾ ಪೊಲೀಸ್ ಇಲಾಖೆಗೆ ಮಾಹಿತಿ ನೀಡಬೇಕು. ಹೆಣ್ಣು ಮಕ್ಕಳು ಗುಟ್ ಟಚ್ ಮತ್ತು ಬ್ಯಾಡ್ ಟಚ್ ಬಗ್ಗೆ ತಿಳಿದಿರಬೇಕು. ಮಕ್ಕಳ ರಕ್ಷಣಾ ಮತ್ತು ಸಂರಕ್ಷಣಾ ಕಾಯ್ದೆ 2006 ರ ಪ್ರಕಾರ ಹುಡುಗಿಯ ಮನಸ್ಸಿಗೆ ವಿರುದ್ಧವಾಗಿ ಮದುವೆ ಮಾಡಿದರೆ ಅದನ್ನು ಆಸಿಂಧು ಎಂದು ಪರಿಗಣಿಸಲಾಗುವುದು. ಮತ್ತು ಮದುವೆಯಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬರೂ ಶಿಕ್ಷೆಗೆ ಗುರಿಯಾಗುತ್ತಾರೆ. ಮಕ್ಕಳ ಹಕ್ಕುಗಳು ಬಹಳ ಆಳವಾದ ತತ್ವಗಳನ್ನು ಒಳಗೊಂಡಿವೆ. ಈ ಹಕ್ಕುಗಳಲ್ಲಿ ಮುಖ್ಯವಾಗಿ ಜೀವಿಸಲು, ಬೆಳೆಯಲು, ಸಮಾನತೆ, ಶಿಕ್ಷಣ, ಆರೋಗ್ಯ, ಮತ್ತು ಕುಟುಂಬ ಶೋಷಣೆಯಿಂದ ಮುಕ್ತವಾಗಿರುವ ಹಕ್ಕುಗಳು ಸೇರಿವೆ. ಆದರೆ, ಬಡತನ, ಅಸಮಾನತೆ, ಮತ್ತು ದೌರ್ಜನ್ಯಗಳಂತಹ ಅಡೆತಡೆಗಳು ಇನ್ನೂ ಮಕ್ಕಳ ಹಕ್ಕುಗಳತ್ತ ಧಕ್ಕೆ ತರುತ್ತಿವೆ ಎಂದು ಹೇಳಿದರು.

ಎಸ್ಪಿ ಶ್ರೀಹರಿ ಬಾಬು ಬಿ.ಎಲ್., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರಾದ ಎಸ್.ಶ್ವೇತಾ, ಡಿಡಿಪಿಐ ವೆಂಕಟೇಶ ರಾಮಚಂದ್ರಪ್ಪ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಸುದೀಪ್ ಕುಮಾರ ಉಂಕಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಅಲ್ಪಸಂಖ್ಯಾತರ ಸಮುದಾಯದ ಬಿಇಡಿ, ಡಿಇಡಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ ಬಿಇಡಿ ಮತ್ತು ಡಿಇಡಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ನೀಡಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ತಿಳಿಸಿದ್ದಾರೆ.

ಅಲ್ಪಸಂಖ್ಯಾತ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ಖ ಮತ್ತು ಪಾರ್ಸಿ) ಸಮುದಾಯದ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ನೀಡಲಾಗುತ್ತಿದ್ದು, ಅಭ್ಯರ್ಥಿಗಳು ಸೇವಾ ಸಿಂಧು ಪೋರ್ಟಲ್ https://sevasindu.karnataka.gov.in ಮೂಲಕ ಡಿ.25 ರೊಳಗಾಗಿ ಅರ್ಜಿ ಸಲ್ಲಿಸಿ, ಅಗತ್ಯ ದಾಖಲಾತಿಗಳೊಂದಿಗೆ ವಿದ್ಯಾರ್ಥಿ ವ್ಯಾಸಂಗ ಮಾಡುತ್ತಿರುವ ಕಾಲೇಜು ಇರುವ ತಾಲ್ಲೂಕಿನ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಲ್ಲಿ ಸಲ್ಲಿಸಬೇಕು.

**ಜಿಲ್ಲಾ ಮತ್ತು ತಾಲ್ಲೂಕುವಾರು ಮಾಹಿತಿ ಕೇಂದ್ರದ ವಿವರ:** ಬಳ್ಳಾರಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಮೌಲಾನ ಅಜಾದ ಭವನದ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ (ಮೊ.8310321101), ಸಂಡೂರು ತೋಟಗಾರಿಕೆ ಇಲಾಖೆಯಲ್ಲಿನ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ (ಮೊ.9036925966, 8660575061), ಸಿರುಗುಪ್ಪದ ಬಳ್ಳಾರಿ ರಸ್ತೆಯ ನಗರಸಭೆ ಆವರಣದ ತಾಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ(ಮೊ.9148889975) ಗೆ ಸಂಪರ್ಕಿಸಬಹುದು.

**ಷರತ್ತುಗಳು:**

ಅಭ್ಯರ್ಥಿಯು ಕರ್ನಾಟಕ ರಾಜ್ಯಕ್ಕೆ ಸೇರಿದವರಾಗಿರಬೇಕು. ಅಭ್ಯರ್ಥಿಯು ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಸಮುದಾಯಕ್ಕೆ ಸೇರಿದವರಾಗಿರಬೇಕು. ಕೋರ್ಸ್‌ಗಳ ಅವಧಿಗೆ ತಕ್ಕಂತೆ ಪ್ರತಿ ವರ್ಷ (ಗರಿಷ್ಠ 2 ವರ್ಷ) ರೂ.25,000 ಗಳಂತೆ ಅನುದಾನ ನೀಡಲಾಗುತ್ತದೆ. ಅಭ್ಯರ್ಥಿಗಳು National Council for teacher Education ಹಾಗೂ Department of State Education Research and Training ಇದರಡಿ ಮಾನ್ಯತೆ ಪಡೆದ ಸರ್ಕಾರಿ/ಅರೆ ಸರ್ಕಾರಿ/ಖಾಸಗಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರಬೇಕು. ಅಭ್ಯರ್ಥಿ ಪೋಷಕರ ವಾರ್ಷಿಕ ಆದಾಯ ಗರಿಷ್ಠ ರೂ.6 ಲಕ್ಷ ಮೀರಿರಬಾರದು.

ವಿದ್ಯಾರ್ಥಿಗಳು ಬಿ.ಎಡ್ ಹಾಗೂ ಡಿ.ಎಡ್ ಕೋರ್ಸ್‌ಗಳಲ್ಲಿ ದಾಖಲಾಗಿರುವ ಹಾಗೂ ಶುಲ್ಕವನ್ನು ಭರಿಸಿರುವ ಬಗ್ಗೆ ಎಲ್ಲಾ ಅಧಿಕೃತ ದಾಖಲಾತಿಗಳನ್ನು ಸಲ್ಲಿಸಬೇಕು. ಅಭ್ಯರ್ಥಿಗಳು ಹಿಂದಿನ ಸಾಲಿನಲ್ಲಿ ಕನಿಷ್ಠ ಶೇ.50ರಷ್ಟು ಅಂಕ ಪಡೆದು ಉತ್ತೀರ್ಣರಾಗಿರಬೇಕು. ಸುಳ್ಳು ಮಾಹಿತಿ, ದಾಖಲಾತಿ/ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡಿ ಪ್ರೋತ್ಸಾಹಧನ ಪಡೆದಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ನೀಡಲಾದ ಪ್ರೋತ್ಸಾಹ ಧನ ಮೊತ್ತವನ್ನು ವಸೂಲಿ ಮಾಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ನಗರದ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಮೌಲಾನ ಅಜಾದ ಭವನದ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಸಹಾಯವಾಣಿ ಸಂಖ್ಯೆ ಮೊ.8277799990 (24*7) ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಕಾರ್ಮಿಕರಿಗೆ ವಿವಿಧ ಯೋಜನೆಗಳ ಅರಿವು ಅಗತ್ಯ

**ಮೊದಲ ಪುಟದಿಂದ**

ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು. ಅರ್ಹ ಎಲ್ಲಾ ಕಾರ್ಮಿಕರು ಯೋಜನೆಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಮಿಕ ಅಧಿಕಾರಿ ಸುಧಾ ಚಿ. ಗರಗ ಅವರು ಮಾತನಾಡಿದರು.

ಕಾರ್ಯಾಗಾರದಲ್ಲಿ ಕೊಪ್ಪಳ ವಿಭಾಗದ ಕಾರ್ಮಿಕ ನಿರೀಕ್ಷಕ ಶಿವಶಂಕರ ಬಿ ತಳವಾರ, ಕುಷ್ಟಗಿ ವಿಭಾಗದ ಕಾರ್ಮಿಕ ನಿರೀಕ್ಷಕಿ ನಿವೇದಿತಾ, ಗಂಗಾವತಿ ವಿಭಾಗದ ಕಾರ್ಮಿಕ ನಿರೀಕ್ಷಕ ಅಶೋಕ ಸೇರಿದಂತೆ ಕಾರ್ಮಿಕ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಾಯಿತ ಕಾರ್ಮಿಕರು, ಕಾರ್ಮಿಕ ಇಲಾಖೆ ಸಿಬ್ಬಂದಿ ಹಾಗೂ ಮತ್ತಿತರರಿದ್ದರು.

# ಮಣ್ಣಿನ ಸಂರಕ್ಷಣೆ ಅತ್ಯವಶ್ಯಕವಾಗಿದೆ : ರಾಹುಲ್ ಪಾಂಡೇಯ

**ಮೊದಲ ಪುಟದಿಂದ**

ಮಕ್ಕಳಿಗೆ ಅರಿವು ಮೂಡಿಸಲು ಪ್ರಾಯೋಗಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮೊದಲನೇ ಹಂತದಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರಿನ ಜವಾಹರ ನವೋದಯ ವಿದ್ಯಾಲಯವನ್ನು ಆಯ್ಕೆಮಾಡಿ ಪ್ರತಿ ಬ್ಯಾಚ್‌ನಲ್ಲಿ 25 ವಿದ್ಯಾರ್ಥಿಗಳು ಒಳಗೊಂಡ 5 ಬ್ಯಾಚ್‌ಗಳನ್ನು ಮಾಡಲಾಗಿದೆ. ಈ ವಿದ್ಯಾರ್ಥಿಗಳಿಗೆ ಕೃಷಿ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಸಹಾಯದಿಂದ ಮಣ್ಣು ಮಾದರಿಯ ಸಂಗ್ರಹಣೆ ಮಾಡುವ ವಿಧಾನ, ಸಂಗ್ರಹಣೆ ಮಾಡಿದ ಮಾದರಿಗಳ ವಿಶ್ಲೇಷಣೆ, ಮಣ್ಣು ಮಾದರಿ ಚೀಟಿ ತಯಾರಿಕೆ ಹಾಗೂ ಮಣ್ಣು ಮಾದರಿ ಚೀಟಿಗೆ ಅನುಗುಣವಾಗಿ ಮಣ್ಣಿಗೆ ನೀಡಬೇಕಾದ ಪೋಷಕಾಂಶಗಳ ಬಗ್ಗೆ ಅರಿವು ಮೂಡಿಸಲಾಗುವುದು ಎಂದರು

ಮಣ್ಣು ಆರೋಗ್ಯ ಕಾರ್ಡ್ ವಿತರಣೆ: ಮಣ್ಣಿನ ಗುಣಧರ್ಮ, ಫಲವತ್ತತೆ ಹಾಗೂ ಪೋಷಕಾಂಶಗಳ ವಿವರವುಳ್ಳ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ಹಿಡುವಳಿದಾರ ರೈತರಿಗೆ ಕಾರ್ಯಕ್ರಮದಲ್ಲಿ ವಿತರಿಸಲಾಯಿತು. ವಿಶ್ವ ಮಣ್ಣು ದಿನಾಚರಣೆ ನಿಮಿತ್ತ ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಮುಖ್ಯಸ್ಥ ಡಾ ಎಂ.ವಿ.ರವಿ ಅವರು ವಿಶೇಷ ಉಪನ್ಯಾಸನ ನೀಡಿದರು. ಕಾರ್ಯಕ್ರಮದಲ್ಲಿ ಬೆಂಗಳೂರು ಐಎಟಿ ಸಂಸ್ಥೆಯ ಕಾರ್ಯದರ್ಶಿ ವೀರಣ್ಣ ಎಸ್ ಕಾಂತರ, ಉಪ ಕೃಷಿ ನಿರ್ದೇಶಕ ಎಲ್.ಸಿದ್ದೇಶ ಸೇರಿದಂತೆ ಜಿಲ್ಲೆಯ ರೈತರು, ಕೃಷಿ ಸಖಿಯರು ಹಾಗೂ ಕೃಷಿ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು


ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

ಮುಂದುವರೆದ ಭಾಗ ........ ಮಾನವನ ಕಣ್ಣು ಮತ್ತು ವರ್ಣಮಯ ಜಗತ್ತು

13. ಕೊಟ್ಟಿರುವ ಚಿತ್ರದಲ್ಲಿ ವ್ಯಕ್ತಪಡಿಸಿದಂತೆ ದೃಷ್ಟಿದೋಷವನ್ನು ಹೊಂದಿರುವ ವ್ಯಕ್ತಿಯು -2D ಸಾಮರ್ಥ್ಯ ಹೊಂದಿರುವ ಮಸೂರದ ಕನ್ನಡಕವನ್ನು ಖರೀದಿಸಿದ್ದಾರೆ. ಆ ವ್ಯಕ್ತಿಯ ದೃಷ್ಟಿದೋಷ ಪರಿಹಾರಕ್ಕೆ ಈ ಮಸೂರವು ಸೂಕ್ತವೇ? ವಿವರಿಸಿ




ಉತ್ತರ: • ಬೆಳಕಿನ ಕಿರಣಗಳು ರೆಟಿನಾದ ಹಿಂಬಾಗದಲ್ಲಿ ಕೇಂದ್ರೀಕೃತವಾಗಿರುವುದರಿಂದ ಇದು ದೂರದೃಷ್ಟಿ ದೋಷವಾಗಿದೆ.

• ಈ ದೋಷದ ನಿವಾರಣೆಗೆ ಪೀನಮಸೂರದ ಕನ್ನಡಕದ ಅವಶ್ಯಕತೆ ಇದೆ.

• ಮಸೂರದ ಸಾಮರ್ಥ್ಯ -2D ಆಗಿರುವುದರಿಂದ ವ್ಯಕ್ತಿ ಖರೀದಿಸಿದ ಕನ್ನಡಕವು ನಿಮ್ನಮಸೂರವಾಗಿದೆ. ಇದು ಸೂಕ್ತವಲ್ಲ.

14. ಈ ಕೆಳಗಿನವುಗಳಿಗೆ ವೈಜ್ಞಾನಿಕ ಕಾರಣ ಬರೆಯಿರಿ.

1. ಅಪಾಯ ಸಂಕೇತ ದೀಪಗಳು ಅಥವಾ ಟ್ರಾಫಿಕ್ ಸಿಗ್ನಲ್‌ಗಳಲ್ಲಿ ನಿಲ್ಲುವ ಸೂಚನೆಗೆ ಕೆಂಪು ಬಣ್ಣದಲ್ಲಿರುತ್ತವೆ.

ಉತ್ತರ: ಏಕೆಂದರೆ, ಕೆಂಪು ಬಣ್ಣವು ಮಂಜು ಮತ್ತು ಹೊಗೆಯಿಂದ ಕನಿಷ್ಠ ಚದುರುತ್ತದೆ. ಆದ್ದರಿಂದ, ಬಹಳ ದೂರದಿಂದಲೂ ಕೆಂಪು ಬಣ್ಣ ಕಾಣಬಹುದು.

2. ನಕ್ಷತ್ರಗಳ ಮಿನುಗುತ್ತವೆ ಏಕೆ ?

ಉತ್ತರ: ವಾಯುಮಂಡಲದಲ್ಲಿನ ವಿವಿಧ ಸ್ತರಗಳ ವಕ್ರೀಭವನ ಸ್ಥಿರಾಂಕವು ಭಿನ್ನವಾಗಿದೆ. ಇದರಿಂದ ನಕ್ಷತ್ರಗಳಿಂದ ಬರುವ ಬೆಳಕು ಸತತವಾಗಿ ವಕ್ರೀಭವನ ಹೊಂದುತ್ತದೆ. ಹಾಗೂ ನಕ್ಷತ್ರಗಳು ಮಿನುಗಿದಂತೆ ಕಾಣುತ್ತವೆ.

3. ಭೂಮಿಯಿಂದ ವೀಕ್ಷಿಸಿದಾಗ ನಕ್ಷತ್ರವು ತನ್ನ ನೈಜ ಎತ್ತರಕ್ಕಿಂತ ಸ್ವಲ್ಪ ಎತ್ತರದಲ್ಲಿ ಕಾಣಿಸುತ್ತದೆ.

ಉತ್ತರ: ವಾಯುಮಂಡಲವು ನಕ್ಷತ್ರದ ಬೆಳಕನ್ನು ಲಂಬದ ಕಡೆ ಬಾಗಿಸುವುದರಿಂದ ನಕ್ಷತ್ರದ ತೋರಿಕೆಯ ಸ್ಥಾನವು ಅದರ ನೈಜ ಸ್ಥಾನಕ್ಕಿಂತ ಸ್ವಲ್ಪ ಬೇರೆಯಾಗಿರುತ್ತದೆ. ಆದ್ದರಿಂದ ಭೂಮಿಯಿಂದ ವೀಕ್ಷಿಸಿದಾಗ ನಕ್ಷತ್ರವು ತನ್ನ ನೈಜ ಎತ್ತರಕ್ಕಿಂತ ಸ್ವಲ್ಪ ಎತ್ತರದಲ್ಲಿ ಕಾಣಿಸುತ್ತದೆ.

4. ಶುಭ್ರ ಆಕಾಶದ ಬಣ್ಣ ನೀಲಿಯಾಗಿ ಕಾಣಿಸುತ್ತದೆ.

ಉತ್ತರ: ಸೂರ್ಯನ ಬೆಳಕು ವಾಯುಮಂಡಲ ಪ್ರವೇಶಿಸಿದಾಗ ಗಾಳಿಯಲ್ಲಿರುವ ಅತಿಸಣ್ಣ ಕಣಗಳು ಅಧಿಕ ತರಂಗಾಂತರದ ಕೆಂಪು ಬಣ್ಣ ಕ್ಕಿಂತ, ಕಡಿಮೆ ತರಂಗಾಂತರದ ನೀಲಿ ಬಣ್ಣವನ್ನು ತೀವ್ರವಾಗಿ ಚದುರಿಸುತ್ತವೆ. ಚೆದುರಿದ ನೀಲಿ ಬಣ್ಣ ಮಾತ್ರ ನಮ್ಮ ಕಣ್ಣನ್ನು ತಲುಪುತ್ತದೆ. ಆದ್ದರಿಂದ ಆಕಾಶವು ನೀಲಿ ಬಣ್ಣದ್ದಾಗಿ ಕಾಣುತ್ತದೆ.

5. ಸೂರ್ಯೋದಯ ಮತ್ತು ಸೂರ್ಯಾಸ್ತದಲ್ಲಿ ಸೂರ್ಯನು ಕೆಂಪಗೆ ಕಾಣುತ್ತಾನೆ.

ಉತ್ತರ: ಸೂರ್ಯೋದಯ ಹಾಗೂ ಸೂರ್ಯಾಸ್ತದ ಸಂದರ್ಭದಲ್ಲಿ ಬೆಳಕು ವಾತಾವರಣದಲ್ಲಿ ಹೆಚ್ಚು ದೂರ ಕ್ರಮಿಸುತ್ತದೆ. ಕಡಿಮೆ ತರಂಗದೂರವುಳ್ಳ ಬಣ್ಣಗಳು ಚದುರಿಹೋಗಿ ಹೆಚ್ಚು ತರಂಗದೂರವುಳ್ಳ ಕೆಂಪು ಬೆಳಕು ನಮ್ಮ ಕಣ್ಣಿಗೆ ತಲುಪುತ್ತವೆ. ಆದ್ದರಿಂದ ಸೂರ್ಯನು ಕೆಂಪಗೆ ಕಾಣುತ್ತಾನೆ.

15. ದೂರದೃಷ್ಟಿಯುಳ್ಳ ಕಣ್ಣಿನ ಸಮೀಪ ಬಿಂದು 1 ಮೀ. ಈ ದೋಷ ಪರಿಹರಿಸಲು ಬೇಕಾದ ಮಸೂರದ ಸಾಮರ್ಥ್ಯ ಎಷ್ಟು ? ಸಾಮಾನ್ಯ ಕಣ್ಣಿನ ಕನಿಷ್ಠ ದೃಷ್ಟಿದೂರ 25 ಸೆಂ.ಮೀ. ಎಂದು ಭಾವಿಸಿ.

ಉತ್ತರ: ವಸ್ತುವಿನ ದೂರ $u = -25c = -0.25m$

ಪ್ರತಿಬಿಂಬದ ದೂರ $v = -1\,m$

ಮಸೂರದ ಸೂತ್ರ $\frac{1}{v} - \frac{1}{u} = \frac{1}{f} \Rightarrow \frac{1}{-1} - \frac{1}{-0.25} = \frac{1}{f}$

$\frac{1}{f} = -1 + \frac{1}{0.25} \Rightarrow -1 + 4 = 3$

ಮಸೂರದ ಸಾಮರ್ಥ್ಯ $= 3\,D$ $\therefore \left[P = \frac{1}{f}\right]$

www.hampitimes.com - Hampi Times Margadarshi

## ಅಧ್ಯಾಯ 10 : ಕಾರ್ಬನ್ ಮತ್ತು ಅದರ ಸಂಯುಕ್ತಗಳು

1. ಅಲ್ಕೇನ್, ಅಲ್ಕೀನ್ ಮತ್ತು ಅಲ್ಕೈನ್‌ಗಳ ಸಾಮಾನ್ಯ ಸೂತ್ರ ಬರೆಯಿರಿ.

ಉತ್ತರ: • ಅಲ್ಕೇನ್‌ಗಳ ಸಾಮಾನ್ಯ ಸೂತ್ರ : $C_nH_{2n+2}$

• ಅಲ್ಕೀನ್‌ಗಳ ಸಾಮಾನ್ಯ ಸೂತ್ರ : $C_nH_{2n}$

• ಅಲ್ಕೈನ್‌ಗಳ ಸಾಮಾನ್ಯ ಸೂತ್ರ : $C_nH_{2n-2}$

2. ಸಾಬೂನು ಬಟ್ಟೆಯನ್ನು ಹೇಗೆ ಸ್ವಚ್ಛಗೊಳಿಸುತ್ತದೆ ? ವಿವರಿಸಿ. ಗಡಸು ನೀರಿನಲ್ಲಿ ಬಟ್ಟೆಯನ್ನು ಸ್ವಚ್ಛಗೊಳಿಸಲು ಹೆಚ್ಚು ಪ್ರಮಾಣದ ಸಾಬೂನು ಬೇಕಾಗುತ್ತದೆ. ಏಕೆ ?


ಉತ್ತರ: • ಸಾಬೂನಿನ ಅಣುಗಳು ಉದ್ದ ಸರಪಳಿಯ ಕಾರ್ಬಾಕ್ಸಿಲಿಕ್ ಆಮ್ಲಗಳ – ಸೋಡಿಯಂ ಅಥವಾ ಪೊಟಾಸಿಯಂ ಲವಣಗಳಾಗಿವೆ.
ಸಾಬೂನಿನ ಅಣುಗಳ ಹೈಡ್ರೋಕಾರ್ಬನ್ ತುದಿಯು ಜಿಡ್ಡಿನ ಕಡೆಗೆ ಮತ್ತು ಅಯಾನಿಕ ತುದಿಯು ಹೊರಮುಖವಾಗಿರುತ್ತದೆ.
ಸಾಬೂನಿನ ಅಣುಗಳು ನೀರಿನೊಂದಿಗೆ ವರ್ತಿಸಿದಾಗ ಮಿಸೆಲ್‌ಗಳೆಂಬ ರಚನೆಯನ್ನು ಉಂಟುಮಾಡುತ್ತವೆ.
ನೀರಿನೊಂದಿಗೆ ತೊಳೆದಾಗ ಈ ಮಿಸೆಲ್‌ಗಳು ಜಿಡ್ಡನ್ನು ಕಿತ್ತು ಹೊರತೆಗೆದು ಬಟ್ಟೆಗಳನ್ನು ಸ್ವಚ್ಛಗೊಳಿಸಲು ಸಹಾಯಮಾಡುತ್ತವೆ.

• ಗಡಸು ನೀರಿನಲ್ಲಿರುವ ಲವಣಗಳು ಸಾಬೂನಿನೊಂದಿಗೆ ವರ್ತಿಸಿ ಕರಗದ ಚೆರಟವನ್ನು ಉಂಟುಮಾಡುತ್ತವೆ, ಆದ್ದರಿಂದ ಹೆಚ್ಚು ಸಾಬೂನು ಬಳಸಬೇಕಾಗುತ್ತದೆ.


3. ರಚನಾ ಸಮಾಂಗಿಗಳು ಎಂದರೇನು ? ಸಮಾಂಗತೆಯನ್ನು ತೋರಿಸುವ ಅಲ್ಕೇನ್‌ಗಳ ಮೊದಲ ಸದಸ್ಯ ಹೆಸರಿಸಿ? ಅದರ ರಚನಾ ಸಮಾಂಗಿಗಳನ್ನು ಬರೆಯಿರಿ

ಉತ್ತರ: ಒಂದೇ ಅಣುಸೂತ್ರ ಆದರೆ ಭಿನ್ನ ರಚನಾ ವಿನ್ಯಾಸ ಹೊಂದಿರುವ ಸಂಯುಕ್ತಗಳನ್ನು ಸಮಾಂಗಿಗಳು ಎನ್ನುವರು

ಸಮಾಂಗತೆಯನ್ನು ತೋರಿಸುವ ಅಲ್ಕೇನ್‌ಗಳ ಮೊದಲ ಸದಸ್ಯ – ಬ್ಯೂಟೇನ್ $C_4H_{10}$



n–ಬ್ಯೂಟೇನ್




ಐಸೋ– ಬ್ಯೂಟೇನ್

4. ಸೈಕ್ಲೋಆಲ್ಕೈನ್‌ಗಳ ಸಾಮಾನ್ಯ ಸೂತ್ರವು $C_nH_{2n}$ ಮತ್ತು ಇದರ ಮೊದಲ ಸದಸ್ಯ ಸೈಕ್ಲೋಪ್ರೋಪೇನ್ ($C_3H_6$) ಆಗಿದೆ. ಈ ಅನುರೂಪ ಶ್ರೇಣಿಯಲ್ಲಿರುವ ನಾಲ್ಕನೇ ಸದಸ್ಯನ ಅಣುಸೂತ್ರ ಮತ್ತು ರಚನಾ ವಿನ್ಯಾಸವನ್ನು ಬರೆಯಿರಿ. MARCH-2023

ಉತ್ತರ : ಅಣುಸೂತ್ರ : $C_6H_{12}$

ರಚನಾ ವಿನ್ಯಾಸ :




5. ಕಾರ್ಬನ್ ಸಂಯುಕ್ತಗಳಲ್ಲಿ ಅಪರ್ಯಾಪ್ತ ಹೈಡ್ರೋಕಾರ್ಬನ್‌ಗಳನ್ನು ಗುರುತಿಸಿ ಮತ್ತು ಅವುಗಳ ರಚನಾ ವಿನ್ಯಾಸವನ್ನು ಬರೆಯಿರಿ :

$C_6H_6$, $C_5H_{12}$ , $C_2H_5OH$, $C_2H_2$

ಉತ್ತರ :

ರಚನಾ ವಿನ್ಯಾಸ :





ಅಪರ್ಯಾಪ್ತ ಹೈಡ್ರೋಕಾರ್ಬನ್ ಗಳು : ಈಥೈನ್ ($C_2H_2$) ಬೆಂಜೀನ್ ($C_6H_6$)

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ